# ಕಲ್ಯಾಣ ಕಿರಣ

ನವೆಂಬರ್–2017 ಬೆಲೆ–20 ರೂ.



ಪೂಜ್ಯ ಮಾತಾಜಿಯವರಿಂದ ಪೀಠಾರೋಹಣ











## ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು ॥ ಪ ॥

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ.ಪ.॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? ॥ 4 ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು ॥ 6 ॥

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.

ಸಂಪುಟ-49 ಬಸವ ಶಕೆ -884 ಪಂಚ ವಾರ್ಷಿಕ ಸದಸ್ಯತ್ವ 1000 ರೂ.

ಸಂಚಿಕೆ-11 ನವೆಂಬರ್- 2017 ವಾರ್ಷಿಕ ಚಂದಾ 200 ರೂ.

## ಕಿರಣ ಗನ್ನಡಿ



### ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2018ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

**Kalyana Kirana** -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297 Email-kalyana.kirana1134@gmail.com





### ಕೂಡಲ ಸಂಗಮ ಸುಕ್ಷೇತ್ರದಲ್ಲಿ
### ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

# ಮೂವತ್ತೊಂದನೆಯ ಶರಣ ಮೇಳ

### 2018ರ ಜನವರಿ 11, 12, 13 ಮತ್ತು 14 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಮೂವತ್ತೊಂದನೆಯ ಶರಣ ಮೇಳವು 2018ರ ಜನವರಿ 11, 12, 13 ಮತ್ತು 14ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. 4 ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

## ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 14ನೆಯ ದಿನಾಂಕದ ರಾತ್ರಿವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 10,000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು :3000 ರೂ.
2. ಪೋಷಕರು : 8000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 1500 ರೂ.
3. ದಾನಿಗಳು: 5000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 500 ರೂ.

**ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.**

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10,000/20,000 ರೂಪಾಯಿಗಳ ಪುದುವಟ್ಟು (F.D)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ''ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ''ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ. ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮ ಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

---

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105

---

Sharana Mela Utsava Samithi, (Canara Bank, Bangalore) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.


**ಸಂಪರ್ಕಿಸುವ ವಿಳಾಸಗಳು**

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 9448046554/9880768555



ಸಂಪಾದಕೀಯ



# ವಿಶ್ವವಿದ್ಯಾಲಯದ ವಿದ್ವಾಂಸರ ಪ್ರಾಮಾಣಿಕತೆ

ದಿ.30-9-2017ರಂದು ಶರಣ. ಬಾಣೂರು ಹಿರಣ್ಣಯ್ಯ ಎರಡು ಪುಸ್ತಕಗಳಲ್ಲಿ ಪ್ರಕಟವಾದ ವಚನಗಳ ಜೆರಾಕ್ಸ್ ಪ್ರತಿಗಳನ್ನು ತಂದುಕೊಟ್ಟರು.

1. ಶ್ರೀ ಸಿದ್ಧರಾಮೇಶ್ವರ ವಚನಗಳು - ಪ್ರಥಮ ಮುದ್ರಣ - ಆಗಸ್ಟ್ 1968, ಸಂಪಾದಕರು - ಆರ್.ಸಿ. ಹಿರೇಮಠ, ಪ್ರಕಾಶಕರು- ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

2. ವಿಶೇಷಾನುಭವ ಷಟಸ್ಥಲ- ಪ್ರಥಮ ಮುದ್ರಣ - 1971, ಸಂಪಾದಕರು ಡಾ॥ ಆರ್.ಸಿ.ಹಿರೇಮಠ, ಪ್ರಕಾಶಕರು - ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಸಿದ್ಧರಾಮೇಶ್ವರ ವಚನಗಳು ಪುಸ್ತಕ 920ನೆಯ ವಚನ ಹೀಗಿದೆ:

1. ಹೆಸರಿಡಬಾರದ ಘನತರ ಲಿಂಗವ ಹೆಸರಿಟ್ಟು
ವಾಙ್ಮನಕ್ಕಗೋಚರವಪ್ಪ ಲಿಂಗವ ವಾಕ್ಯಕ್ಕೆ ತಂದು
'ಅತ್ಯತಿಷ್ಠದ್ದಶಾಂಗುಲಂ' ಎಂಬ ಲಿಂಗವ ಚಿತ್ತಕ್ಕೆ ತಂದು
ಸುತ್ತಿರ್ದ ಮಾಯಾಪ್ರಪಂಚವ ಬಿಡಿಸಿದ ಬಸವಣ್ಣ
ಚಿತ್ತಶುದ್ಧನ ಮಾಡಿದ ಬಸವಣ್ಣ
ಮಲತ್ರಯಂಗಳ ಹರಿದು, ಶುದ್ಧ ತಾತ್ಪರ್ಯವರುಹಿ
ಮುಕ್ತನ ಮಾಡಿದ ಗುರು ಬಸವಣ್ಣ
ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯನೆನ್ನ ಕಾರಣ
ಬಸವಣ್ಣ ಧರೆಗೆ ಬಂದ (ಪುಟ 282)

.2. ವಿಶೇಷಾನುಭವ ಷಟಸ್ಥಲ ಎಂಬ ಪುಸ್ತಕದ ಪುಟ 50ರಲ್ಲಿ 12ನೆಯ ವಚನ ಹೀಗಿದೆ:

ಹೆಸರಿಡಬಾರದ ಲಿಂಗವ ಹೆಸರಿಟ್ಟು
ವಾಙ್ಮನಕ್ಕಗೋಚರವಪ್ಪ ಲಿಂಗವ ವಾಕ್ಯಕ್ಕೆ ತಂದು
ಅತ್ಯತಿಷ್ಠದ್ದಶಾಂಗುಲವೆಂಬ ಲಿಂಗವ ಚಿತ್ತಕ್ಕೆ ತಂದು
ಸುತ್ತಿರ್ದ ಮಾಯಾ ಪ್ರಪಂಚವಂ ಬಿಡಿಸಿ
ಚಿತ್ತ ಶುದ್ಧನಂ ಮಾಡಿ ಮಲತ್ರಯಂಗಳಂ ಪರಿದು
ಶುದ್ಧ ತಾತ್ಪರ್ಯ ಮುಕ್ತನ ಮಾಡಲೆಂದು
ಗುರು ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನೆನ್ನ
ಕಾರಣ ಧರೆಗೆ ಬಂದ.

ಮೊದಲ ಪುಸ್ತಕ ಅಧಿಕೃತ ಪುಸ್ತಕ; ಎರಡನೆಯದು ಬೇರೊಬ್ಬ ಸಂಪಾದನೆಕಾರನ ಪುಸ್ತಕ. ಶ್ರೀ ಸಿದ್ಧರಾಮೇಶ್ವರರು ಗುರು ಬಸವಣ್ಣನವರ ಸಾಧನೆ ಏನು ಎಂಬುದನ್ನು ಮನಬಿಚ್ಚಿ ಬಣ್ಣಿಸಿದ್ದಾರೆ. ಎರಡನೆಯ ಪುಸ್ತಕದಲ್ಲಿ ಧರ್ಮಗುರು ಬಸವಣ್ಣನವರ ಹೆಸರನ್ನು ತೆಗೆದು, ಈ ಎಲ್ಲ ಸಾಧನೆ ದೀಕ್ಷಾಗುರುವಿನದು ಎಂಬ ಭಾವ ಬರುವಂತೆ ಮಾಡಲಾಗಿದೆ. ಈ ಕೈವಾಡ ಯಾರದು? ಡಾ॥ ಆರ್.ಸಿ.ಹಿರೇಮಠರೇ ಸಂಪಾದಿಸಿರುವ ಎರಡೂ ಕೃತಿಗಳಲ್ಲಿ ಅಗಾಧವಾದ ವ್ಯತ್ಯಾಸ. ಸಂಪಾದಿತ ಕೃತಿಯನ್ನು ಪ್ರಕಟಿಸುವಾಗ ಮೂಲ ಕೃತಿಯನ್ನು ಗಮನಿಸಬೇಕು ತಾನೆ? ಅನೇಕ ಬಾರಿ ಅನೇಕ ಸಂಪಾದಕರು ತಾವು ನೇರವಾಗಿ ಕೃತಿಗಳನ್ನು ಓದದೆ ಸಂಶೋಧನ ವಿದ್ಯಾರ್ಥಿಗಳಿಗೆ ಆ ಕೆಲಸ ಬಿಟ್ಟು, ಅವರು ಸಿದ್ಧಪಡಿಸಿದ ಪುಸ್ತಕಗಳನ್ನು ಪ್ರಕಟಿಸಿ ಬಿಡುವರು. (ಹೀಗಾಗಿ ಕರ್ನಾಟಕ ಸರ್ಕಾರದವರು ಪ್ರಕಟಿಸಿರುವ ವಚನ ಗ್ರಂಥಗಳು ಸಾಕಷ್ಟು ಲೋಪದೋಷಗಳಿಂದ ಕೂಡಿವೆ).

ವಿಶೇಷಾನುಭವ ಷಟಸ್ಥಲ ಮತ್ತು ನಿಷೇಧಕ್ಕೆ ಒಳಗಾದ ಮುಕ್ತಿ ಕಂಠಾಭರಣ ಮುಂತಾದವು ನಂತರದ ಕಾಲದಲ್ಲಿ ಸಂಪಾದಿಸಲ್ಪಟ್ಟ ಕೃತಿಗಳು. ಮೂಲ ವಚನದಲ್ಲಿ ಧರ್ಮಗುರು ಬಸವಣ್ಣನವರ ಸಾಧನೆಯನ್ನು ಕೊಂಡಾಡಿದ್ದರೆ, ಸಂಪಾದಿತ ಕೃತಿ ವಿಶೇಷಾನುಭವ ಷಟಸ್ಥಲದಲ್ಲಿ ಧರ್ಮಗುರುವಿನ ಹೆಸರು ತೆಗೆದು ಆ ಸಾಧನೆಯನ್ನು ದೀಕ್ಷಾಗುರುವಿಗೆ ಆರೋಪಿಸಲಾಗಿದೆ. ಅಷ್ಟಾವರಣದಲ್ಲಿ ಬರುವ ಮೊದಲ ತತ್ವ 'ಗುರು'. ಇಲ್ಲಿ ಸಹ ಧರ್ಮಗುರುವನ್ನು ಭದ್ರಪಡಿಸಿದರೆ ಮಾತ್ರ ಲಿಂಗಾಯತ ಧರ್ಮ-ಸಮಾಜಗಳು ಉಳಿಯಲು ಸಾಧ್ಯ.

ಸಿದ್ಧರಾಮೇಶ್ವರರ ಈ ವಚನದಲ್ಲಿ ಹೇಳಿರುವ ಮಹತ್ವದ ಸತ್ಯಗಳೆಂದರೆ :

1. ನಾಮಕ್ಕೆ ಅತೀತನಾದ ಸೃಷ್ಟಿಕರ್ತನಿಗೆ ಗುರು ಬಸವಣ್ಣನವರು ಒಂದು ಹೆಸರು ಕೊಟ್ಟರು (ಲಿಂಗದೇವ).

2. ವಾಙ್ಮನಕ್ಕೆ ಅಗೋಚರವಾದ ಲಿಂಗವ ರೂಪಕ್ಕೆ ತಂದು (ಇಷ್ಟಲಿಂಗ) ಘನತರವಾದ ಕಾರ್ಯಮಾಡಿ ಲೋಕದ ಮತ್ತು ನನ್ನ ಉದ್ಧಾರಕ್ಕಾಗಿ ಗುರು ಬಸವಣ್ಣ ಈ ಧರೆಗೆ ಬಂದಿದ್ದಾರೆ.

ನನ್ನ ಅಂತರಾತ್ಮವು ದೃಢವಾಗಿ ನುಡಿಯುವ ಮಾತೆಂದರೆ ಗುರು ಬಸವಣ್ಣನವರು ಸಾಕ್ಷಾತ್ಕಾರದ ನಂತರ ತಮ್ಮ ವಚನ ಮುದ್ರಿಕೆಯನ್ನು ಲಿಂಗದೇವ ಎಂದೇ ಮಾಡಿದ್ದಾರೆ. ನಂತರದ ಲಿಪಿಕಾರರು ಮತ್ತು ಕೆಲವು ಪುರೋಹಿತಶಾಹಿ ಮನೋಭಾವದ ಸಂಪಾದನಾಕಾರರು ಲಿಂಗದೇವ ತೆಗೆದು ಹಳೆಯ ಮುದ್ರಿಕೆ ಕೂಡಲ ಸಂಗಮದೇವವನ್ನೇ ಮುಂದುವರಿಸಿದ್ದಾರೆ. ಏಕೆಂದರೆ ಗುರು ಬಸವಣ್ಣನವರು ಕೂಡಲ ಸಂಗಮದೇವ ತಾತ್ವಿಕ ದೋಷವನ್ನು ಉಂಟು ಮಾಡುತ್ತದೆ ಎಂಬುದನ್ನು ಅರಿಯದಷ್ಟು ಅಪ್ರಬುದ್ಧರೆ..?

****



॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

**866666**

ಬೆಂಗಳೂರು ನಗರದ ಬಸವನ ಗುಡಿಯಲ್ಲಿರುವ

## ನ್ಯಾಷನಲ್ ಕಾಲೇಜು ಮೈದಾನದಲ್ಲಿ

## ಲಿಂಗಾಯತ ಧರ್ಮದ ರಾಷ್ಟ್ರೀಯ ಸಮಾವೇಶ

ಲಿಂಗಾಯತ ಧರ್ಮ ಮಹಾಸಭೆಯ 22ನೆಯ ವಾರ್ಷಿಕೋತ್ಸವ



**ದಿ: 19-11-2017, ದೇವ(ಭಾನು)ವಾರ,**

**ಬೆಳಿಗ್ಗೆ 10.30**



**ಸರ್ವರಿಗೂ ಆದರದ ಸುಸ್ವಾಗತ**

**ಶರಣರ ಬರುವೆಮಗೆ ಪ್ರಾಣ ಜೀವಾಳ**

ಲಿಂಗಾಯತ ಧರ್ಮ ಮಹಾಸಭಾ(ರಿ.)
ಬಸವ ಮಂಟಪ, 2035, 20ನೇ ಮೇನ್,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು

ದೂ: 080-23131476, 9448466805, 9035687072

## ಲಿಂಗಾಯತ ಸಮಾವೇಶದಲ್ಲಿ ಭಾಗವಹಿಸಲು ಕರೆ

ಶರಣ ಬಂಧುಗಳೇ,

ಲಿಂಗಾಯತ ಧರ್ಮ ಮಹಾಸಭಾ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ದಿ.23-6-1995ರಂದು ನೋಂದಾವಣೆ ಗೊಂಡಿರುವ ಒಂದು ಸಂಸ್ಥೆಯಾಗಿದ್ದು, ನೋಂದಣಿ ಸಂಖ್ಯೆ 217/95-96 ಆಗಿದೆ. ಸಾವಿರಾರು ಸದಸ್ಯರನ್ನು ಹೊಂದಿರುವ ಲಿಂಗಾಯತ ಧರ್ಮ ಮಹಾಸಭಾ ಸ್ಥಾಪನೆಗೊಂಡು 22 ವರ್ಷಗಳು ಸಂದಿರುವ ಸನ್ನಿವೇಶದಲ್ಲಿ ಬೆಂಗಳೂರು ನಗರದ ಬಸವನಗುಡಿಯಲ್ಲಿರುವ ನ್ಯಾಷನಲ್ ಕಾಲೇಜು ಮೈದಾನದಲ್ಲಿ ದಿ-19-11-2017ರಂದು ಬೆಳಿಗ್ಗೆ 10-30ರಿಂದ ಲಿಂಗಾಯತರು ಮತ್ತು ಬಸವಾಭಿಮಾನಿಗಳ ಬೃಹತ್ ಸಮಾವೇಶವು ನಡೆಯಲಿದೆ. ಪರವೂರಿನಿಂದ ಬಂದವರಿಗೆ ಬೆಳಿಗ್ಗೆ ಉಪಾಹಾರ ಮತ್ತು ಮಧ್ಯಾಹ್ನ ಭಾಗವಹಿಸಿದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿರುವುದು.

ಈ ಸಮಾವೇಶದಲ್ಲಿ ಅನೇಕ ಮಠಾಧೀಶರು, ಪ್ರಗತಿಪರ ಚಿಂತನೆಯ ಸಾಹಿತಿಗಳು, ರಾಜಕಾರಣಿಗಳು, ಸಮಾನ ಮನಸ್ಕ ಚಿಂತಕರು ಭಾಗವಹಿಸಿ ಉಪನ್ಯಾಸ ನೀಡಲಿದ್ದಾರೆ. ಲಿಂಗಾಯತ ಧರ್ಮಕ್ಕೆ ಜೈನ, ಬೌದ್ಧ, ಸಿಖ್ ಧರ್ಮಗಳಿಗೆ ಕೊಟ್ಟಂತೆ ಸಾಂವಿಧಾನಿಕ ಮಾನ್ಯತೆಯನ್ನು ಕೇಂದ್ರ ಸರ್ಕಾರ ಕೊಡಲು ಶಿಫಾರಸು ಮಾಡಬೇಕೆಂದು ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರಿಗೆ ಮನವಿ ಸಲ್ಲಿಸಲಾಗಿದೆ. ಬೃಹತ್ ರ್‍ಯಾಲಿಗಳ ಮೂಲಕ ಒಕ್ಕೊರಲಿನಿಂದ ಲಿಂಗಾಯತರ ಮನದ ಆಶಯವನ್ನು ತಿಳಿಸಲಾಗಿದೆ. ಆದರೂ ಸಹಿತ ಮುಖ್ಯಮಂತ್ರಿಗಳು ನಿರ್ಧಾರವನ್ನು ತೆಗೆದುಕೊಳ್ಳುತ್ತಿಲ್ಲ; ವಿಳಂಬ ನೀತಿಯನ್ನು ಅನುಸರಿಸುತ್ತಲಿದ್ದಾರೆ. ಆದಷ್ಟು ಬೇಗನೆ ಶಿಫಾರಸು ಮಾಡಬೇಕೆಂದು ಆಗ್ರಹಿಸಲು ಈ ಸಮಾವೇಶವನ್ನು ಏರ್ಪಾಡು ಮಾಡಲಾಗಿದೆ. ಇದು ಜಾತ್ಯತೀತ ಮತ್ತು ಪಕ್ಷಾತೀತ ಸಮಾವೇಶ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ವಿ.ಸೂ: ಎಲ್ಲಾ ಕಡೆಯಿಂದ ಟ್ರೈನ್ ಮತ್ತು ಬಸ್ಸುಗಳ ವ್ಯವಸ್ಥೆಯು ಬೆಂಗಳೂರಿಗೆ ಇರುವುದರಿಂದ ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ಕೋರುತ್ತೇವೆ. ಬೆಂಗಳೂರು ನಗರದಲ್ಲಿ ಕಲ್ಯಾಣ ಮಂಟಪದ ಬಾಡಿಗೆ ವಿಪರೀತ ಇರುವುದರಿಂದ ವಸತಿ ವ್ಯವಸ್ಥೆ ಮಾಡಲು ಸಾಧ್ಯವಾಗದು. ಉಳಿಯುವುದಾದಲ್ಲಿ ತಮ್ಮ ವಸತಿ ವ್ಯವಸ್ಥೆ ತಾವೇ ಮಾಡಿಕೊಳ್ಳಬೇಕು. ಕಾರ್ಯಕ್ರಮ ಮತ್ತು ಪ್ರಸಾದ ದಾಸೋಹಕ್ಕೆ ಉದಾರವಾಗಿ ಕಾಣಿಕೆ ನೀಡಬೇಕೆಂದು ವಿನಂತಿಸುತ್ತೇವೆ.

ಪೂಜ್ಯ ಚನ್ನಬಸವಾನಂದ ಸ್ವಾಮೀಜಿ
ಅಧ್ಯಕ್ಷರು, ರಾಷ್ಟ್ರೀಯ ಸಮಿತಿ
ಮೊ: 9880296108

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಸಂಸ್ಥಾಪಕ ಗೌರವಾಧ್ಯಕ್ಷೆ
ಲಿಂಗಾಯತ ಧರ್ಮ ಮಹಾಸಭಾ(ರಿ.)



## ಲಿಂಗಾಯತ ಧರ್ಮ ಮಹಾಸಭಾ(ರಿ)
## ಸದಸ್ಯತ್ವಕ್ಕೆ ಕರೆ

ಲಿಂಗಾಯತ ಧರ್ಮ ಮಹಾಸಭಾ ಸದಸ್ಯರಾಗಲು ಲಿಂಗಾಯತರು ಮಾತ್ರವಲ್ಲ ಗುರು ಬಸವಣ್ಣನವರ ತತ್ತ್ವ, ಸಿದ್ಧಾಂತಗಳಲ್ಲಿ ನಂಬಿಕೆ ಇರುವ ಲಿಂಗಾಯತೇತರ ಬಸವಾಯತರಿಗೂ ಅವಕಾಶವಿದೆ.

ಸಾಮಾನ್ಯ ಸದಸ್ಯತ್ವ-ವಾರ್ಷಿಕ 20ರೂ
ಆಜೀವ ಸದಸ್ಯತ್ವ- 1000ರೂ
ಮಿಸ್ಡ್ ಕಾಲ್ ಸಂಖ್ಯೆ-9555-40-7551

ಆಸಕ್ತಿ ಇರುವವರು ಮೊಬೈಲ್‌ನಲ್ಲಿ ಮಿಸ್ಡ್ ಕಾಲ್ ಕೊಟ್ಟರೆ ಅವರನ್ನು ಸದಸ್ಯರನ್ನಾಗಿ ಸ್ವೀಕರಿಸಿ, ಆಗಾಗ ಮಹತ್ವದ ಮಾಹಿತಿ ಕೊಡಲಾಗುವುದು. ನಮಗೆ ಸದಸ್ಯತ್ವದ ಹಣ ನಂತರ ಕೊಡಬಹುದು. ವಾರ್ಷಿಕ ಸದಸ್ಯರಾಗುವುದಕ್ಕಿಂತಲೂ ಆಜೀವ ಸದಸ್ಯ (1000ರೂ.ತುಂಬಿ)ರಾಗುವುದು ಹೆಚ್ಚು ಸೂಕ್ತ.

ಲಿಂಗಾಯತ ಧರ್ಮ ಮಹಾಸಭಾದ ಬ್ಯಾಂಕ್ ಖಾತೆಯ ವಿವರ :

1. S.B.A/C- 01145101021572, ಕೆನರಾ ಬ್ಯಾಂಕ್, ಒಂದನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 IFSC - CNRB0001145
2. 80 ಜಿ ಇನ್‌ಕಂಟ್ಯಾಕ್ಸ್ ಸೌಲಭ್ಯ ಬೇಕಾದವರು Basava Mahamane Charitable Trust, CAA/c- 04361010000248, ಸಿಂಡಿಕೇಟ್ ಬ್ಯಾಂಕ್, ರಾಜಾಜಿನಗರ, ಬೆಂಗಳೂರು-560010 IFSC- SYNB0000436 ಗೆ ಕಳಿಸಬೇಕು.

ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಿ ಲಿಂಗಾಯತ ಧರ್ಮ ಮಹಾಸಭಾವನ್ನು ಪೋಷಿಸಬೇಕೆಂದು ಕೋರುತ್ತೇವೆ.

### ನ್ಯಾಷನಲ್ ಕಾಲೇಜಿಗೆ ಸಾರಿಗೆ ಸೌಲಭ್ಯ

ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನ ಬಹು ಪರಿಚಿತ ಸ್ಥಳವಾಗಿದ್ದು ಯಶವಂತಪುರ ರೇಲ್ವೆ ನಿಲ್ದಾಣದಿಂದ ಸೀದಾ ಮೆಟ್ರೋ ಟ್ರೈನ್‌ಗಳಿವೆ. ಕೆ.ಆರ್.ಮಾರ್ಕೆಟ್, ಮೆಜೆಸ್ಟಿಕ್‌ನಿಂದಲೂ ಮೆಟ್ರೋ ಅನುಕೂಲತೆ ಇದೆ. ಕೆ.ಆರ್.(ಸಿಟಿ) ಮಾರುಕಟ್ಟೆಯಿಂದ 210, 210B ಬಸ್‌ಗಳು ಬರುತ್ತವೆ. ಮೆಜೆಸ್ಟಿಕ್‌ನಿಂದ 210 A, 210 AA, 210 CA, 210 E, 210 EA, 210 I, 210 J, 210 K, 210 KA, 210 N, 2ಹೀಗೆ ಹಲವಾರು ನಗರ ಸಾರಿಗೆ ಬಸ್ಸು ಸಂಚರಿಸುತ್ತವೆ. ಮೆಜೆಸ್ಟಿಕ್, ರೇಲ್ವೆ ನಿಲ್ದಾಣದಿಂದ ಕಾವೇರಿ ಭವನ, ಕಾರ್ಪೋರೇಷನ್, ಟೌನ್‌ಹಾಲ್, ಕೆ.ಆರ್ ಮಾರುಕಟ್ಟೆ, ಕಿಮ್ಸ್ ಆಸ್ಪತ್ರೆ, ಮಕ್ಕಳ ಕೂಟ, ಮಹಿಳಾ ಸೇವಾ ಸಮಾಜ ಮಾರ್ಗವಾಗಿ ನ್ಯಾಷನಲ್ ಕಾಲೇಜ್ ಮೈದಾನಕ್ಕೆ ಬರಬೇಕು.

## ಲಿಂಗಾಯತ ಧರ್ಮೀಯನ ನಂಬಿಕೆಗಳು

1. ವಿಶ್ವಗುರು ಬಸವಣ್ಣನವರೇ ಲಿಂಗಾಯತ ಧರ್ಮ ಸಂಸ್ಥಾಪಕರು
2. ಗುರು ಬಸವಣ್ಣನವರು, ಅವರ ಸಮಕಾಲೀನ ಶರಣರು,
   ಅವರ ಪರಂಪರೆಯ ಶರಣರು ಕೊಟ್ಟ ವಚನ ಸಾಹಿತ್ಯವೇ
   ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನ
3. ಲಿಂಗಾಯತ ಧರ್ಮದ ದೇವರ ಹೆಸರು–ಲಿಂಗದೇವ.
4. ಲಿಂಗಾಯತ ಧರ್ಮದ ಧಾರ್ಮಿಕ ಲಾಂಛನ–ಸೃಷ್ಟಿಕರ್ತ
   ಲಿಂಗದೇವನ ಕುರುಹಾದ ಇಷ್ಟಲಿಂಗ
5. ಲಿಂಗಾಯತ ಧರ್ಮದ ಧರ್ಮಭಾಷೆ –ಕನ್ನಡ
6. ಲಿಂಗಾಯತ ಧರ್ಮದ ಗಣ ಲಾಂಛನ–ಷಟ್‌ಕೋನ
   ಇಷ್ಟಲಿಂಗಸಹಿತ ಬಸವ ಧ್ವಜ
7. ಲಿಂಗಾಯತ ಧರ್ಮದ ಕ್ಷೇತ್ರಗಳು–ವಿಶ್ವಗುರು ಬಸವಣ್ಣನವರ
   ಐಕ್ಯಕ್ಷೇತ್ರ ಕೂಡಲ ಸಂಗಮ, ಶರಣ ಭೂಮಿ ಬಸವ ಕಲ್ಯಾಣ
8. ಲಿಂಗಾಯತ ಧರ್ಮದ ವಾರ್ಷಿಕ ಸಮಾವೇಶ–
   ಕೂಡಲ ಸಂಗಮದ ಶರಣ ಮೇಳ, ಬಸವ ಕಲ್ಯಾಣದ ಕಲ್ಯಾಣ ಪರ್ವ
9. ಲಿಂಗಾಯತ ಧರ್ಮದ ಗುರು ಮಂತ್ರ– ಓಂ ಶ್ರೀ ಗುರುಬಸವ ಲಿಂಗಾಯ ನಮಃ
   ದೇವ ಮಂತ್ರ–ಓಂ ಲಿಂಗಾಯ ನಮಃ
10. ಲಿಂಗಾಯತ ಧರ್ಮದ ಶ್ರದ್ಧಾ ಕೇಂದ್ರ–ಬಸವ ಮಂಟಪ,
    ವಾರದ ಪ್ರಾರ್ಥನೆ–ಶರಣ ಸಂಗಮ
11. ಲಿಂಗಾಯತ ಧರ್ಮದ ಪವಿತ್ರ ಮಾಸ–ಶ್ರಾವಣ ಮಾಸ
12. ಲಿಂಗಾಯತ ಧರ್ಮದ ಪರಂಪರೆ–ಶರಣ ಪರಂಪರೆ
13. ಪೂಜ್ಯ ವಸ್ತು– ಗುರು ಬಸವಣ್ಣ–ಇಷ್ಟಲಿಂಗ–ಜಂಗಮ ಮೂರ್ತಿಗಳು
    ಸಾಧನ: ವಿಭೂತಿ–ರುದ್ರಾಕ್ಷಿ–ಮಂತ್ರ
    ಫಲಗಳು: ಕರುಣೋದಕ, ಕರುಣಪ್ರಸಾದ
14. ಷಡಾಚಾರ–ಬಸವಾಚಾರ, ಲಿಂಗಾಚಾರ, ಸದಾಚಾರ,
    ಶಿವಾಚಾರ, ಗಣಾಚಾರ, ಭೃತ್ಯಾಚಾರ
15. ಷಟಸ್ಥಲ ದರ್ಶನ ಶಾಸ್ತ್ರ–ಭಕ್ತ, ಮಹೇಶ, ಪ್ರಸಾದಿ, ಪಾಣಲಿಂಗಿ, ಶರಣ, ಐಕ್ಯ
16. ನಿತ್ಯವಿಧಿಗಳು–ಅರ್ಚನೆ, ಅರ್ಪಣೆ (ಕಾಯಕ–ದಾಸೋಹ–ಪ್ರಸಾದ) ಅನುಭಾವ
17. ಲಿಂಗಾಯತ ಧರ್ಮದ ಧ್ಯೇಯ–ಜಾತಿ–ವರ್ಣ–ವರ್ಗ ರಹಿತ–ಧರ್ಮ ಸಹಿತ,
    ಶರಣ ಸಮಾಜ, ಕಲ್ಯಾಣ ರಾಜ್ಯ ನಿರ್ಮಾಣ.

**ಬನ್ನಿ, ಅರಿಯಿರಿ, ಕೈಜೋಡಿಸಿರಿ, ಸಂಘಟಿಸಿರಿ**



## ರಾಮರಾಜ್ಯ ಮತ್ತು ಕಲ್ಯಾಣರಾಜ್ಯ

– ಮಾತಾಜಿ

ದಿ: 2–10–2017 ಗಾಂಧೀ ಜಯಂತಿ. ಮಹಾತ್ಮ ಗಾಂಧೀಜಿಯವರ ಬಗ್ಗೆ ನನಗೆ ತುಂಬಾ ಗೌರವ ಮತ್ತು ಅಭಿಮಾನ. ಆದರೆ ಅವರ ಕೆಲವು ನಂಬುಗೆಗಳನ್ನು ಅವರು ಬೆಳಸಿಕೊಂಡ ಬಗ್ಗೆ ಅಪಾರ ಮರುಕ. ಅವರ ಮತ್ತು ಆರ್.ಎಸ್.ಎಸ್ ಸಹಿತವಾಗಿ ಅನೇಕ ಹಿಂದೂವಾದಿಗಳ ಆದರ್ಶ ರಾಮರಾಜ್ಯ ಸ್ಥಾಪನೆ. ಸುಮ್ಮನೆ ವಿಚಾರ ಮಾಡುವುದಾರೆ ರಾಮರಾಜ್ಯದಲ್ಲಿ ಯಾರು ಸುಖವಾಗಿದ್ದರು? ತಂದೆಯು ತಾಯಿಗೆ ಕೊಟ್ಟ ಮಾತನ್ನು ಪಾಲಿಸುವುದಕ್ಕಾಗಿ ಕಾಡನ್ನು ಶ್ರೀರಾಮನು ಸೇರಿದ. ಇದು ಒಂದು ಆದರ್ಶವಾಗಿ ಕಾಣವುದಾದರೂ ತಾಯಿ–ತಂದೆ ಹೇಳಿದ ಮಾತನ್ನು ಪಾಲಿಸಲು ಇಂದಿನ ತರುಣರು ವರದಕ್ಷಿಣೆಗಾಗಿ ಪೀಡಿಸುವುದುಂಟು. ಯಜ್ಞಯಾಗಾದಿಗಳ ರಕ್ಷಣೆಗಾಗಿ ಋಷಿಮುನಿಗಳ ಬೇಡಿಕೆಯ ಮೇರೆಗೆ ರಾಮ–ಲಕ್ಷ್ಮಣರು ನಿಲ್ಲುವುದುಂಟು. ಮೂಲ ನಿವಾಸಿಗಳಾದ ದ್ರಾವಿಡರು ಶಿವಭಕ್ತರಾಗಿ ಯಜ್ಞಯಾಗಾದಿಗಳ ವಿರೋಧಿಗಳಾಗಿದ್ದರು. ಅವರನ್ನು ರಾಕ್ಷಸರೆಂದು ಆರ್ಯರು ಕರೆಯುತ್ತಿದ್ದರು. ಶೂದ್ರನಾದ ಶಂಭುಕನು ತಪಸ್ಸಿಗೆ ಕುಳಿತಿದ್ದ. ಆಗ ಓರ್ವ ಬ್ರಾಹ್ಮಣ ಬಂದು ಅಪಚಾರವಾಗುತ್ತಿದೆ. ಶೂದ್ರನು ತಪಸ್ಸು ಮಾಡುವುದರಿಂದ ಪಾಪ ಉಂಟಾಗಿ ನನ್ನ ಮಗ ಸತ್ತ ಹೋದ. ಎಂದು ಹೇಳಿದಾಗ ಶ್ರೀರಾಮನು ಹೋಗಿ ಕಣ್ಣು ಮುಚ್ಚಿ ತಪಸ್ಸು ಮಾಡುತ್ತಿದ್ದ ಶಂಭುಕನಿಗೆ ಬಾಣಬಿಟ್ಟು ಕೊಂದನು. ರಾಮರಾಜ್ಯದಲ್ಲಿ ಶೂದ್ರ ಅಸ್ಪೃಶ್ಯರಿಗೆ ಧಾರ್ಮಿಕ ಹಕ್ಕುಗಳು ಲಭ್ಯವಾಗುವುದಿಲ್ಲ ಎಂಬುದು ಇದರಿಂದ ಸಿದ್ಧವಾಗುತ್ತದೆ.

ಎಲ್ಲಕ್ಕೂ ಮೀರಿದ ಅಮಾನವೀಯ ಪ್ರಸಂಗ ಸೀತೆಯನ್ನು ಅವಳು ಗರ್ಭಿಣೆ ಎಂಬುದನ್ನೂ ಕಡೆಗಣಿಸಿ ಒಬ್ಬ ಅಗಸನ ಪಿಸುಣ ನುಡಿಯನ್ನು ಆಧರಿಸಿ ಕಾಡಿಗೆ ಅಟ್ಟಿದ್ದು. ಮಾನವೀಯತೆಯ ಸೋಂಕೂ ಇಲ್ಲದ ಈ ನಡೆ ಖಂಡನೀಯ. ರಾಮನಿಗೆ ಕಷ್ಟ ಬಂದಾಗ ಸೀತೆ ವನವಾಸದ ಕಾಲದಲ್ಲಿ ಹಿಂಬಾಲಿಸಿದಳು; ಆದರೆ ಸೀತೆ ಗರ್ಭಿಣೆ ಎಂಬುದನ್ನೂ ಕಡೆಗಣಿಸಿ ಏಕಾಂಗಿಯಾಗಿ ಕಾಡಿನಲ್ಲಿ ಬಿಡಲಾಯಿತು. ರಾಮನ ಸೇವೆ ಮಾಡಿದ್ದಕ್ಕೆ ಶೂದ್ರನಾದ ಹನುಮಂತನಿಗೆ ಮತ್ತು ಅವನ ಜನ ಸಮುದಾಯಕ್ಕೆ ಸಿಕ್ಕಿದ್ದು ಸೊಟ್ಟ ಮೂತಿ ಮತ್ತು ಬಾಲ.

ಗುರು ಬಸವಣ್ಣನ ಕಲ್ಯಾಣ ರಾಜ್ಯದಲ್ಲಿ ಶೂದ್ರ, ಅಸ್ಪೃಶ್ಯ, ಮಹಿಳೆಯರು ಶರಣ–ಶರಣೆಯರಾದರು, ಎಲ್ಲ ಮಾನವರ ಹಕ್ಕುಗಳ ರಕ್ಷಣೆಯಾಯಿತು. ಗುರು ಬಸವಣ್ಣನವರ ತಾಯಿ ತಂದೆ ಸಂಪ್ರದಾಯವನ್ನು ಹೇರಲು ಯತ್ನಿಸಿದಾಗ ಅವರು ನಿರಾಕರಿಸಿ ದೇವರೇ ನನ್ನ ತಾಯಿ ತಂದೆ ಎಂದು ಸತ್ಯವನ್ನು ಆಶ್ರಯಿಸಿದರು. ಕಾಯಕದ ಹಾಲಿನ ಹೊಳೆಯಲ್ಲಿ ದಾಸೋಹದ ತೆಪ್ಪ ತೇಲಿತು. ವರ್ಣಾಶ್ರಮ, ವ್ಯವಸ್ಥೆ ಕಸದಂತೆ ಕಂಡಿದ್ದ ಜನಾಂಗಗಳವರೇ ಉತ್ಥಾನ ಹೊಂದಿ ಮಹೋನ್ನತ ಸಾಧನೆ ಮಾಡಿದರು; ಶ್ರೇಷ್ಠವಾದ ವಚನ ಸಾಹಿತ್ಯವನ್ನು ಕೊಟ್ಟರು. ಆದ್ದರಿಂದ ಆರ್‌ಎಸ್‌ಎಸ್‌ನವರು ಪ್ರಾಂಜಲ ಮನಸ್ಸಿನಿಂದ ಗುರು ಬಸವಣ್ಣನವರ ಮತ್ತು ಲಿಂಗಾಯತ ಧರ್ಮದ ಮಹತ್ವ ಅರಿತು ಕಲ್ಯಾಣ ರಾಜ್ಯ ನಿರ್ಮಾಣಕ್ಕೆ ಶ್ರಮಿಸಲಿ.

# ಹಿಂದೂ ಧರ್ಮ – ಹಿಂದೂಗಳ ಕುರಿತು
# ಬಾಬಾ ಅಂಬೇಡ್ಕರ್ ಅವರ ನೇರ ನುಡಿಗಳು

– ಸಂಗ್ರಹ

ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಿ, ಸಕಲ ಮಾನವ ಸಮಾನತೆ ಆಚರಣೆಯಲ್ಲಿ ಬಂದಾಗ ಹಿಂದೂ ಧರ್ಮ ಶಕ್ತಿಯುತವಾಗುವುದೇ ಅಲ್ಲದೆ ವಿಶ್ವಧರ್ಮವಾಗಿ ಪರಿಣಮಿಸುತ್ತದೆ.

ಮಾನವನಿಗೆ ಆಹಾರವೊಂದೇ ಮುಖ್ಯವಲ್ಲ. ಆತನಿಗೆ ಮನಸ್ಸು ಎನ್ನುವುದೂ ಉಂಟು. ಅದಕ್ಕೆ ವಿವೇಚನಾಮೃತದ ಅಗತ್ಯವಿರುತ್ತದೆ. ಧರ್ಮ ಮಾನವರಲ್ಲಿ ಆಸ್ಥೆಯನ್ನು ಮೂಡಿಸಿ, ಪ್ರಗತಿಪಥದತ್ತ ಮುನ್ನಡೆಸುತ್ತದೆ. ಆದರೆ ಹಿಂದೂ ಧರ್ಮ ದಲಿತ ಜನಾಂಗಗಳಲ್ಲಿ ಉತ್ಸಾಹ, ಬಯಕೆಗಳನ್ನು ಮೆಟ್ಟಿಹಾಕಿದೆ. ಆದ್ದರಿಂದ ಆ ಧರ್ಮವನ್ನು ತ್ಯಜಿಸಬೇಕಾಗಿದೆ ಬಂದಿದೆ.

ನಮ್ಮ ಮಹೋನ್ನತವಾದ ನಾಗರಿಕತೆ, ಸಂಸ್ಕೃತಿ ಆರು ಕೋಟಿ ಅಸ್ಪೃಶ್ಯರನ್ನೂ ಮೂರು ಕೋಟಿ ಗಿರಿಜನರನ್ನು ಐವತ್ತು ಸಾವಿರ ಅಪರಾಧಿ ಜಾತಿಗಳನ್ನೂ ಸೃಷ್ಟಿಸಲು ಸಮರ್ಥವಾಗಿದೆ. ಅಂತಹ ಪ್ರಾಚೀನ ಹಿಂದೂ ನಾಗರಿಕತೆಯನ್ನು ಏನೆಂದು ಕರೆಯಬೇಕು?

ಭಗವದ್ಗೀತೆಯಲ್ಲಿ ನಿರೂಪಿತವಾಗಿರುವ ಹಿಂದೂ ಧರ್ಮದ ಸಾಮಾಜಿಕ ವ್ಯವಸ್ಥೆಗೆ ನಾನು ಪಕ್ಕಾ ವಿರೋಧಿ. ತ್ರಿಗುಣ ಸಿದ್ಧಾಂತ ನನ್ನ ದೃಷ್ಟಿಯಲ್ಲಿ ಕಪಿಲ ಮುನಿಯ ದುಷ್ಟ ಸಿದ್ಧಾಂತವೇ ಆಗುತ್ತದೆ. ಅದೇ ಜಾತಿ ವ್ಯವಸ್ಥೆಗೆ ಮೂಲಕಾರಣವಾಗಿ ಜಾತಿಗಳನ್ನು ಕುಲಗಳನ್ನು ಸೃಷ್ಟಿಸಿದೆ. ಅಸಮಾನತೆಗಳಿಂದ ತುಂಬಿ ತುಳುಕುತ್ತಿರುವ ಸಾಮಾಜಿಕ ಸಿದ್ಧಾಂತವೇ ಗೀತೆಯಲ್ಲಿ ಹಿಂದೂ ಧರ್ಮವಾಗಿ ನಿರೂಪಿಸಲಾಗಿದೆ.

ಭಗವದ್ಗೀತೆಯನ್ನು ಧರ್ಮಗ್ರಂಥವೆಂದು ಭಾವಿಸುವುದಕ್ಕಿಂತ ರಾಜಕೀಯ ಗ್ರಂಥವೆಂದು ಭಾವಿಸುವುದು ಸೂಕ್ತ. ವೇದಗಳಲ್ಲಿ ಹೇಳಿರುವ ವಿಷಯಗಳನ್ನೇ ಪ್ರಚಾರ ಮಾಡುವುದು, ಬ್ರಾಹ್ಮಣರ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವುದು ಮಾತ್ರ ಗೀತೆಯ ಉದ್ದೇಶವೇ ಹೊರತು ಪ್ರಜೆಗಳನ್ನು ಸನ್ಮಾರ್ಗದಲ್ಲಿ ನಡೆಸುವುದಲ್ಲ.

ನ್ಯಾಯ ಲೌಕಿಕವಾದುದು. ಅದನ್ನು ಯಾರು ಬೇಕಾದರೂ ಉಲ್ಲಂಘಿಸಿಬಹುದು. ಧರ್ಮ, ಸಹೋದರತೆ ಪವಿತ್ರವಾಗಿರುವುದರಿಂದ ಪ್ರತಿಯೊಬ್ಬರೂ ಗೌರವಿಸಲೇಬೇಕು. ಈ ನನ್ನ ಸಿದ್ಧಾಂತ ಒಂದು ಮಹಾ ಉದ್ಯಮ. ನಾನು ಮತಾಂತರವಾಗಬೇಕಾದ ಅವಶ್ಯಕತೆ ಉಂಟಾಗಿದೆ. ಆದ್ದರಿಂದ ನನ್ನ ಅನುಯಾಯಿಗಳನ್ನು ತ್ರಿಗುಣ ಸಿದ್ಧಾಂತದಿಂದ ವಿಮುಖರನ್ನಾಗಿ ಮಾಡಿ. ನನ್ನ ಸಿದ್ಧಾಂತದ ಕಡೆಗೆ ಆಕರ್ಷಿಸಬೇಕಾಗಿದೆ. ಪ್ರಸ್ತುತ ಭಾರತೀಯರು ಎರಡು ವಿರೋಧಿ ಸಿದ್ಧಾಂತಗಳ ಮಧ್ಯೆ ಜೀವನ ನಡೆಸುತ್ತಿರುವರು. ಅವರ ರಾಜಕೀಯ ಧ್ಯೇಯಗಳು ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳು ರಾಜ್ಯಾಂಗದಲ್ಲಿ ಭದ್ರವಾಗಿದ್ದು, ಅವುಗಳನ್ನೇ ಅವರ ಹಿಂದೂ ಧರ್ಮ ತಿರಸ್ಕರಿಸಿದೆ.

ಇಂದಿನ ಹಿಂದೂ ಧರ್ಮಕ್ಕೆ ದೇವರು – ನೀತಿ ಎರಡೂ ಇಲ್ಲ. ಇಂತಹ ಸ್ಥಿತಿ ಕೇವಲ ಮಾನವನ ಮನಸ್ಸಿನ ಪತನಕ್ಕೆ ದಾರಿಮಾಡಿಕೊಡುತ್ತದೆ. ಮುಂದಿನ ಪೀಳಿಗೆಯವರು



ಪವಿತ್ರವಾದ ಮಹೋನ್ನತವಾದ, ಸಮಾನತೆಯ ಧರ್ಮವನ್ನು ಪುನರ್ ನಿರ್ಮಿಸುವುದರಲ್ಲಿ ಗುರುತರವಾದ ಜವಾಬ್ದಾರಿಯನ್ನು ಹೊರಬೇಕಾಗಿದೆ. ಸಾಧುಗಳು, ಋಷಿಗಳು, ಪೂಜಾರಿಗಳು ಮತ್ತು ಯಾರೇ ಆಗಲಿ ವಿಗ್ರಹಗಳನ್ನು ಪೂಜಿಸುವುದನ್ನು ಬಿಟ್ಟರೆ ಧರ್ಮವೆಂಬುದು ಆಚರಣೆಯಲ್ಲಿ ಇಲ್ಲವೇ ಇಲ್ಲ.

ನಮ್ಮ ದೇಶದಲ್ಲಿ ಬಡವರ ಶ್ರಮವನ್ನು ದೋಚುತ್ತಾ, ಅವರ ಬಿಸಿನೆತ್ತರವನ್ನು ಹೀರುತ್ತಿರುವ ಧನವಂತರು ಧರ್ಮಕ್ಕೆ ಸಂಬಂಧಿಸಿದ ನೀತಿ, ಶಾಸ್ತ್ರಗಳ ಮರೆಯಲ್ಲಿ ರಕ್ಷಣೆ ಪಡೆಯುತ್ತಿರುವುದು ಘೋರವಾದ ವಿಷಯ.

ಹಿಂದೂ ಧರ್ಮ ಮತ್ತು ಅದಕ್ಕೆ ಸಂಬಂಧಿಸಿದ ಶಾಸ್ತ್ರಗಳು ನ್ಯಾಯವನ್ನು ಶಾಶ್ವತವಾಗಿ ಸಮಾಧಿ ಮಾಡಲು ನೋಡಿದವು. ಯಾವುದನ್ನು ಬೇಕಾದರೂ ಸಮಾಧಿ ಮಾಡ ಬಹುದೇನೋ, ನ್ಯಾಯವನ್ನು ಹಾಗೇ ಮಾಡಲಾಗದೆಂದು ತಿಳಿಯಲು ದೀರ್ಘಕಾಲ ಹಿಡಿದಿದ್ದು ನಿಜಕ್ಕೂ ದುರದೃಷ್ಟಕರ.

ಭಾರತ ದೇಶದಲ್ಲಿನ ಕಾರ್ಮಿಕರಿಗೆ, ಕೃಷಿಕರಿಗೆ ಶತೃಪ್ರಾಯವಾದ ಎರಡು ಶಕ್ತಿಗಳೆಂದರೆ ಬ್ರಾಹ್ಮಣವಾದ, ಬಂಡವಾಳಶಾಹಿ ಪದ್ಧತಿ. ಇವೆರಡನ್ನೂ ಹೋರಾಡಬೇಕು. ಬ್ರಾಹ್ಮಣವಾದ ಎಂದರೆ ಬ್ರಾಹ್ಮಣ ಜಾತಿ ಎಂದಾಗಲೀ ಅವರ ಸ್ಥಾನಮಾನ, ಸುಖಗಳು ಅಭಿರುಚಿಯಿಂದಾಗಲಿ ಅರ್ಥವಲ್ಲ. ಬ್ರಾಹ್ಮಣವಾದ ಎಂದರೆ ಸ್ವಾತಂತ್ರ್ಯ, ಸಮಾನತೆ, ಸಹೋದರ ಭಾವನೆಗಳಿಗೆ ವಿರುದ್ಧವಾದ ಸಿದ್ಧಾಂತ ಎಂದು ನನ್ನ ಅರ್ಥ. ಧೂರ್ತತೆ ಅದರ ಮೂಲಕಾರಣ. ಅದು ಬ್ರಾಹ್ಮಣರಲ್ಲಿಯೇ ಅಲ್ಲದೆ ಇತರೆ ಜಾತಿಗಳಲ್ಲೂ ಯಥೇಚ್ಛವಾಗಿ ಉಂಟು. ಬ್ರಾಹ್ಮಣವಾದ ಕೇವಲ ಸಾಮಾಜಿಕ ಹಕ್ಕುಗಳಾದ ಸಹಪಂಕ್ತಿ ಭೋಜನ, ಅಂತರ್ಜಾತಿ ವಿವಾಹಗಳ ನಿಷೇಧಕ್ಕೆ ಸೀಮಿತವಾಗಿರದೆ, ಇನ್ನೂ ಆಳವಾಗಿ ಒಳಹೊಕ್ಕು ಆರ್ಥಿಕ ಕ್ಷೇತ್ರದಲ್ಲಿನ ಅವಕಾಶಗಳನ್ನೂ ಸಹ ಕಬಳಿಸಿಬಿಟ್ಟಿದೆ.

ಕುಡಿಯಲು ನೀರು ಕೊಡದ, ಕೊನೆ ಪಕ್ಷ ದೇವರನ್ನು ನೋಡಲು ಬಿಡದ ಧರ್ಮ – ಧರ್ಮವೇ ಅಲ್ಲ, ಅದು ಪಾಪದ ಕೊಚ್ಚೆಯ ರಾಶಿ. ಅಂತಹುದನ್ನು ಧರ್ಮ ಎಂದು ಕರೆಯಬಾರದು. ನೀವು ವಿದ್ಯಾವಂತರಾಗುವುದನ್ನು ನಿಷೇಧಿಸಿದೆ. ನಿಮ್ಮ ಭೌತಿಕ ಸುಖಗಳನ್ನೆಲ್ಲಾ ಸರ್ವನಾಶ ಮಾಡಿದ ಧರ್ಮದಲ್ಲಿ ನೀವು ಒಂದು ಕ್ಷಣ ಕೂಡಾ ಇರಬಾರದು. ಮಾನವರ ಬಗ್ಗೆ ಪ್ರೇಮ, ಕನಿಕರ ತೋರಿಸದ ಧರ್ಮ ಧರ್ಮವೇ ಅಲ್ಲ. ಪ್ರಾಣಿಗಳನ್ನು ಕೊಂದರೆ ಪಾಪ ಎಂದು ತನ್ನ ಅನುಯಾಯಿಗಳಿಗೆ ತಿಳಿಸುತ್ತಾ, ಸಮಾನ ಮನದವರನ್ನು ಕ್ರೂರವಾಗಿ ಹಿಂಸಿಸುವುದನ್ನು ನಿಜವಾಗಿಯೂ ಧರ್ಮ ಎನ್ನಬೇಕೆ? ಕೂಡದು. ಇದು ಬರೀ ಮೋಸ – ವಂಚನೆ.

ಜಾತೀಯತೆ ಭದ್ರವಾಗಿ ಬೇರೂರಿರುವ ಮಾನಸಿಕ ಪ್ರವೃತ್ತಿ ಅದು ಬುಡಸಹಿತ ನಾಶವಾಗಬೇಕಾದ್ದಲ್ಲಿ ಮಾನಸಿಕವಾದ ವಿಪ್ಲವ ಬರಬೇಕು. ಹಿಂದೂಗಳು ಜಾತೀಯತೆ ಆಚರಿಸುವಲ್ಲಿ ಅಪಾಯಕರೂ ಹೌದು. ಅಮಾನುಷರೂ ಹೌದು. ಅವರು ಜಾತೀಯತೆಯನ್ನು ಅಷ್ಟು ಕಟ್ಟುನಿಟ್ಟಾಗಿ, ಕ್ರೂರವಾಗಿ ಆಚರಿಸುವುದಕ್ಕಿಂತ ಅವರಿಗೆ ಧರ್ಮದ ಬಗ್ಗೆ ಇರುವ ವ್ಯಾಮೋಹವೇ ಕಾರಣ. ಹಿಂದೂಗಳು ಜಾತೀಯತೆ ಆಚರಿಸುವಲ್ಲಿ ತಪ್ಪಿಲ್ಲ.

(ಮುಂದುವರಿಯುವುದು)

# ಭಕ್ತಿಯ ಪಥವ ತೋರಲು ಬಂದ ಗುರು ಬಸವಣ್ಣನವರು.

– ಬಸವ ಪ್ರಭು ಸ್ವಾಮೀಜ

"ಮರ್ತ್ಯಲೋಕ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯಾ ಒಬ್ಬ ಶರಣನ.....
ಗುಹೇಶ್ವರಾ"

ಅಲ್ಲಮಪ್ರಭುದೇವರ ಈ ವಚನದಲ್ಲಿ ಗುರು ಬಸವಣ್ಣನವರ ಅವತಾರ ಮತ್ತು ಅವರ ಸಾಧನೆಯನ್ನು ಕುರಿತು ಸಮಗ್ರವಾಗಿ ಚಿತ್ರಿಸಿದ್ದಾರೆ. ಪ್ರತಿಯೊಂದು ಜೀವಿಗಳಾದ ಪಶು, ಪಕ್ಷಿ, ಪ್ರಾಣಿಗಳಿಗೆ ನೇರ ಮುಕ್ತಿ ಹೊಂದುವ ಮಾರ್ಗವಿಲ್ಲ. ಅವೆಲ್ಲವು ಯಾವುದೋ ಒಂದು ಪಾಪ-ಪುಣ್ಯದನುಸಾರವಾಗಿ ಶಿಕ್ಷೆಗೆ ಗುರಿಯಾಗಿ ಅನೇಕ ಜನ್ಮಗಳಲ್ಲಿ ಸುತ್ತುತ್ತ ಕೊನೆಗೆ ಎಂಬತ್ತನಾಲ್ಕು ಲಕ್ಷದ ಅಂತಿಮ ಜನ್ಮವಾದ ಮನುಷ್ಯ ಜನ್ಮಕ್ಕೆ ಬಂದು, ಮುಕ್ತಿ ಹೊಂದಲು ಆ ದೇವನ ಅನುಗ್ರಹ-ಕರುಣೆ ಪಡೆದುಕೊಳ್ಳುತ್ತೇವೆ. ಮಾನವ ಜನ್ಮ ಇದು ಮೊದಲನೆಯ ಜನ್ಮವು ಹೌದು; ಕೊನೆಯ ಜನ್ಮವೂ ಹೌದು. ಅದಕ್ಕಾಗಿ ಈ ಮಾನವ ಜನ್ಮಕ್ಕೆ ಬಂದಾಗ ಯೋಗ್ಯ ಗುರುವಿನಿಂದ ಶುದ್ಧ-ಸಂಸ್ಕಾರವನ್ನು ಪಡೆದು ಭಕ್ತಿಯ ಪಥವನ್ನು ಹಿಡಿದು ಅಮರತ್ವ ಪಡೆದುಕೊಳ್ಳಬೇಕಾಗುತ್ತದೆ. ಹುಟ್ಟಿದ ಮಾನವರೆಲ್ಲ ಮಹಾತ್ಮರಾಗಲು, ದೇವಮಾನವರಾಗಲು, ಪ್ರವಾದಿಗಳಾಗಲು ಸಾಧ್ಯವಿಲ್ಲ. ಅದಕ್ಕೂ ದೇವನೊಲುಮೆ ಹರಿದು ಬರಬೇಕು. ಸ್ವತಃ ದೇವನು ತಾನು ಕಟ್ಟಿದ ಮಹಾಮನೆ ಹಾಳಾಗಬಾರದೆಂದು ಈ ಜಗತ್ತಿನ ಉದ್ಧಾರಕ್ಕಾಗಿ ಆಯಾ ಕಾಲ ಪರಿಸರ ಪರಿಸ್ಥಿತಿಗನುಗುಣವಾಗಿ ಒಬ್ಬೊಬ್ಬ ಪ್ರವಾದಿಗಳನ್ನು ಸೃಷ್ಟಿಸಿದ್ದಾನೆ. ಮತ್ತು ಸೃಷ್ಟಿಸುತ್ತಾ ಇರುತ್ತಾನೆ. ಆ ಪ್ರವಾದಿಗಳಿಂದ ಹಲವಾರು ಶತಮಾನಗಳ ಈ ಮರ್ತ್ಯಲೋಕವೆಂಬ ಮಹಾಮನೆ ಆಧ್ಯಾತ್ಮದ ಹೊಂಗಿರಣದಿಂದ ಬೆಳಗುತ್ತಲಿರುತ್ತದೆ.

ಇಂತಹ ಅನೇಕ ಪ್ರವಾದಿಗಳ ಸಾಲಿನಲ್ಲಿ ಗುರು ಬಸವಣ್ಣನವರು ಒಬ್ಬರು. ಸ್ವತ: ದೇವರು ತನ್ನ ಅನುಗ್ರಹವನ್ನು ನೀಡಿದ್ದರಿಂದಲೇ ಈ ಜಗತ್ತಿಗೆ ಭಕ್ತಿಯ ನಿಜ ತತ್ವದ ಮಾರ್ಗತೋರಿಸಲು ಗುರು ಬಸವಣ್ಣನವರು ಅವತರಿಸಿದ್ದಾರೆ. ಅವತಾರ ಸಿದ್ಧಾಂತದಲ್ಲಿ ಎರಡು ಬಗೆ 1) ದೇವಾವತಾರ (ಈ ಜಗತ್ತಿನ ಉದ್ಧಾರಕ್ಕೆ ದೇವನೇ ಇಳಿದು ಬರುವನು) 2) ದೇವಾಂಶವತಾರ (ದೇವನ ಅನುಗ್ರ ಹೊಂದಿದ್ದ ಪ್ರವಾದಿಗಳನ್ನು ಈ ಜಗತ್ತಿನ ಉದ್ಧಾರಕ್ಕೆ ಕಳಿಸುವುದು) ಲಿಂಗಾಯತ ಧರ್ಮವು ದೇವರೇ ಇಳಿದು ಬರುವುದನ್ನು ಒಪ್ಪದು, ದೇವನ ಅವತಾರಿಕನಾದ ಪ್ರವಾದಿಯನ್ನು ಒಪ್ಪುತ್ತದೆ. ಹೀಗಾಗಿ ಗುರು ಬಸವಣ್ಣನವರು ದೇವಾಂಶವತಾರ ಹೊಂದಿ ಈ ಲೋಕಕ್ಕೆ ಬಂದವರು. ಅವರು ಹೆಣ್ಣು, ಹೊನ್ನು, ಮಣ್ಣಿಗಾಗಿ ಬರದೆ ಅಲ್ಲಮಪ್ರಭುದೇವರು ಹೇಳುವಂತೆ ಭಕ್ತಿ ಪಥವ ತೋರಲು ಬಂದವರು.

(ಪುಟ 19ರಲ್ಲಿ ಮುಂದುವರೆದಿದೆ..)











16ನೆಯ ಕಲ್ಯಾಣ ಪರ್ವದ ಕ್ಷಣಗಳು








16ನೆಯ ಕಲ್ಯಾಣ ಪರ್ವದ ಕ್ಷಣಗಳು







16ನೆಯ ಕಲ್ಯಾಣ ಪರ್ವದ ಕ್ಷಣಗಳು












**16ನೆಯ ಕಲ್ಯಾಣ ಪರ್ವದ ಕ್ಷಣಗಳು**

ಈ ಮರ್ತ್ಯಲೋಕ ಸೃಷ್ಟಿಕರ್ತನು ನಿರ್ಮಾಣ ಮಾಡಿದ ಮಹಾಮನೆ. ಇದನ್ನು ಸ್ವಾರ್ಥಿಯಾದ ಮಾನವ ಹಾಳುಮಾಡಬಾರದೆಂಬುದೇ ಪರಮಾತ್ಮನ ಆಶಯ. ಏಕೆಂದರೆ ಸ್ವಾರ್ಥಿಯಾದ ಮನುಷ್ಯ ಇಲ್ಲಿ ಜಾತಿ, ವರ್ಣ, ವರ್ಗ, ಲಿಂಗಭೇದಗಳನ್ನು ಸೃಷ್ಟಿಸಿ, ಮಾನವ ಸಮಾಜದಲ್ಲಿ ಜಾತಿಯೆಂಬ ಅಡ್ಡಗೋಡೆ ನಿರ್ಮಿಸಿ ಮತ್ತು ಭಯ ಆತಂಕವನ್ನು ಹುಟ್ಟಿಸಿ, ಮರ್ತ್ಯದ ಚೆಲುವನ್ನು ನಾಶಮಾಡಿದ್ದಲ್ಲದೆ, ಮರ್ತ್ಯಲೋಕವನ್ನು ನರಕ ಸದೃಶಮಾಡಿ ಸತ್ತ ನಂತರ ಸಿಗುವಂತಹ ಕೈಲಾಸಕ್ಕಾಗಿ ಚಕೋರ ಪಕ್ಷಿಯಂತೆ ಕಾಯುತ್ತಿದ್ದ ಮಂದಮತಿಗಳ ಅಜ್ಞಾನ ನಿವಾರಿಸಲು ಗುರುಬಸವಣ್ಣನವರು ಬಂದು; ಮರ್ತ್ಯಲೋಕವನ್ನೇ ಕೈಲಾಸ ಮಾಡಿ, ಸಂಪ್ರದಾಯವಾದಿಗಳ ಭ್ರಾಂತಿಯನ್ನು ಹೋಗಲಾಡಿಸಿ, ಸ್ವರ್ಗ-ನರಕ ಕಲ್ಪನೆಯನ್ನು ತೆಗೆದು ಹಾಕಿದರು. 'ಸತ್ಯ ನುಡಿವುದೇ ದೇವಲೋಕ ಮಿಥ್ಯ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ ಅನಾಚಾರವೇ ನರಕ." ಎಂದು ವೈಚಾರಿಕ ಕ್ರಾಂತಿಯನ್ನು ಮಾಡಿ ಶುದ್ಧ ಭಕ್ತಿಯ ಪಥದೆಡೆಗೆ ಸರ್ವರನ್ನೂ ಕೊಂಡೊಯ್ಯುವ ಮಾರ್ಗ ತೋರಿದರು.

---

## ನಾಮಕರಣಕ್ಕೆ ಆಹ್ವಾನ

ಶರಣ.ಮಲ್ಲಿಕಾರ್ಜುನ ಮತ್ತು ಶರಣೆ ಮಣಿ
ಬೆಂಡರವಾಡಿ, ಮಳವಳ್ಳಿ ತಾಲ್ಲೋಕು
ಮಂಡ್ಯ ಜಿಲ್ಲೆ

ಇವರಿಂದ ಶರಣು ಶರಣಾರ್ಥಿ.

ವಿಶ್ವಗುರು ಬಸವಣ್ಣನವರ ಕೃಪೆಯಿಂದ ನಮಗೆ ಹೆಣ್ಣುಮಗು ಜನಿಸಿದ್ದು, ಅದರ ನಾಮಕರಣವನ್ನು ದಿ. 23-11-2017 ರಂದು ನಮ್ಮ ಸ್ವಂತ ಮನೆಯಲ್ಲಿ ಏರ್ಪಡಿಸಿದ್ದು, ಪ್ರಥಮ ಮಹಿಳಾ ಜಗದ್ಗುರು

ಪೂಜ್ಯ ಶ್ರೀ ಡಾ॥ ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ, ಕೂಡಲ ಸಂಗಮ

ಇವರ ದಿವ್ಯ ಸನ್ನಿಧಿಯಲ್ಲಿ ಕಾರ್ಯಕ್ರಮವು ನಡೆಯಲಿದೆ. ಪೂಜ್ಯರು ದಿವ್ಯವಾಣಿಯನ್ನು ನೀಡಲಿದ್ದಾರೆ.

ಹೆಚ್ಚಿನ ಶರಣ ಬಂಧುಗಳು ಬಂದು ಭಾಗವಹಿಸಬೇಕೆಂದು ಕೋರುತ್ತೇವೆ.

ಮೊಬೈಲ್ : 9483942368 — ಶರಣ. ಮಲ್ಲಿಕಾರ್ಜುನ ಮತ್ತು
ಶರಣೆ. ಮಣಿ

ಸೂಚನೆ : ಬೆಂಗಳೂರಿನಿಂದ ಬರುವವರು ಮಂಡ್ಯದಲ್ಲಿ ಇಳಿದು ಬನ್ನೂರಿಗೆ ಬಂದು, ಅಲ್ಲಿಂದ ಮುಂದೆ ಮಲ್ಲಿಯೂರು ಕಾಲೇಜ್ ಬಳಿ ಇಳಿದು ಬೆಂಡರವಾಡಿಗೆ ಬರಬೇಕು. ಮೈಸೂರಿನಿಂದ ಬರುವವರು ನೇರವಾಗಿ ಬೆಂಡರವಾಡಿಗೆ ಬರಬಹುದು

## ಲಿಂಗಾಯತ ಧರ್ಮ ಮಹಾಸಭಾ

ನೋಂದಣಿ ಸಂಖ್ಯೆ : 217/95-96

| | | |
|---|---|---|
| ಸಂಸ್ಥಾಪಕ ಅಧ್ಯಕ್ಷರು | : | ಪೂಜ್ಯ ಶ್ರೀ ಮಹಾಜಗದ್ಗುರು<br>ಡಾ॥ ಮಾತೆ ಮಹಾದೇವಿ,<br>ಬಸವ ಧರ್ಮ ಪೀಠ, ಕೂಡಲ ಸಂಗಮ |
| ರಾಷ್ಟ್ರೀಯ ಅಧ್ಯಕ್ಷರು | : | ಪೂಜ್ಯ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ<br>ಶ್ರೀ ಚನ್ನಬಸವೇಶ್ವರ ಜ್ಞಾನಪೀಠ, ಉಳವಿ |

### ರಾಜ್ಯ ಕಾರ್ಯಕಾರಿಣಿ

| | | |
|---|---|---|
| ಮಾರ್ಗದರ್ಶಕರು | : | ಶರಣ. ಎನ್.ಪುಟ್ಟರುದ್ರ, ಬೆಂಗಳೂರು |
| ಗೌರವಾಧ್ಯಕ್ಷರು | : | ಶರಣ. ಕೆ.ಬಸವರಾಜಪ್ಪ, ಬೆಳಗಾವಿ |
| ರಾಜ್ಯ ಅಧ್ಯಕ್ಷರು | : | ಶರಣ. ಚಂದ್ರಮೌಳಿ ಲಿಂಗಾಯತ್, ಬೆಂ |
| ಪ್ರಧಾನ ಕಾರ್ಯದರ್ಶಿ | : | ಶರಣ. ಆರ್.ಜಿ.ಶೆಟಗಾರ್, ಕಲಬುರ್ಗಿ |
| ಉಪಾಧ್ಯಕ್ಷ | : | ಶರಣ. ಕೆ.ವೀರೇಶ್, ಬಸವಗಂಗೋತ್ರಿ |
| ಉಪಾಧ್ಯಕ್ಷ | : | ಶರಣ. ಕೆ.ವೀರಣ್ಣ, ಕೊಪ್ಪಳ |
| ಉಪಾಧ್ಯಕ್ಷ | : | ಶರಣ. ಆನಂದ್ ಗುಡಸ್, ಬೆಳಗಾವಿ |
| ಪ್ರಧಾನ ಸಂಚಾಲಕರು | : | ಶರಣ. ಶ್ರೀಕಾಂತಸ್ವಾಮಿ, ಬೀದರ್ |
| ಸಂಚಾಲಕರು | : | ಶರಣ. ಚನ್ನಬಸವ ಬಿಜಲಿ, ಗೋಕಾಕ್ |
| ಪ್ರಧಾನ ಸಂಘಟಕರು | : | ಶರಣ. ಈಶ್ವರ್ ಲಿಂಗಾಯತ್, ಕೊಪ್ಪಳ |
| ಕೋಶಾಧ್ಯಕ್ಷರು | : | ಶರಣೆ. ಉಮಾ ಚಂದ್ರನ್, ಬೆಂಗಳೂರು |
| ಸಂಘಟಕರು | : | ಶರಣ. ದಿಲೀಪ್ ಭತಮುರ್ಗೆ, ಬೆಂಗಳೂರು |
| ಕಾರ್ಯದರ್ಶಿ | : | ಶರಣ. ಬಸವನಗೌಡರು, ಸವದತ್ತಿ |

### ರಾಷ್ಟ್ರೀಯ ಕಾರ್ಯಕಾರಿಣಿ

| | | |
|---|---|---|
| ಪ್ರಧಾನ ಕಾರ್ಯದರ್ಶಿ | : | ಶರಣ. ಆರ್.ಎಸ್.ದೇಶಿಂಗೆ, ಪುಣೆ |
| ಸಂಘಟಕರು | : | ಶರಣ. ಅವಿನಾಶ್ ಭೋಶಿಕರ್, ನಾಂದೇಡ್ |
| ಉಪಾಧ್ಯಕ್ಷರು | : | ಶರಣ. ಶಿವರಾಜ ಪಾಟೀಲ್ ಅತಿವಾಳ್ |
| ಸಂಚಾಲಕರು | : | ಶರಣ. ಧನರಾಜ್ ಜೀರಗೆ, ಹೈದರಾಬಾದ್ |
| ಸಹ ಸಂಚಾಲಕರು | : | ಶರಣ. ವಿಜಯಕುಮಾರ್ ಪಟ್ನೆ |
| ಉಪಾಧ್ಯಕ್ಷರು | : | ಶರಣ. ಸಂಪತ್‌ಕುಮಾರ್, ಊಟಿ |
| ಕಾರ್ಯದರ್ಶಿ | : | ಶರಣ. ಶಂಕರಪ್ಪ ಪಾಟೀಲ್, ಜಹಿರಾಬಾದ್ |
| ಸಂಘಟನಾ ಕಾರ್ಯದರ್ಶಿ | : | ಶರಣ. ಶಿವರಾಜ ಖಂಕ್ರೆ, ಮುಕ್ರಮಾಬಾದ್ |
| ಸಹ ಸಂಘಟಕರು | : | ಶರಣ. ವೈಜನಾಥ ಬಿರಾದರ್, ದೆಹಲಿ |
| ಸಹ ಸಂಘಟಕರು | : | ಶರಣ. ಸತೀಶ್‌ಕುಮಾರ್ ಪಾಟೀಲ್, ಪುಣೆ |





## ಕಾಯಕ ನಿಷ್ಠೆಯ ಕಾಳವ್ವೆ

ಶ್ರೀಧರ ಗೌಡರ
ವರದಿಗಾರರು, ಕೂಡಲಸಂಗಮ

ಬಸವಾದಿ ಪ್ರಮಥರ ಕಾಲದಲ್ಲಿ ಜೀವಿಸಿದ್ದ ಪ್ರಸಿದ್ಧ ವಚನಕಾರ್ತಿ, ಶಿವಾನುಭವಿ, ಶರಣ ಮಾರ್ಗಾನುಯಾಯಿಯಾದವಳೇ ಕಾಳವ್ವೆ.

ಉರಿಲಿಂಗ ಪೆದ್ದಿಯ ಹೆಂಡತಿಯಾದ ಕಾಳವ್ವೆ. ಉರಿಲಿಂಗ ಪೆದ್ದೆಗಳರಸ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ. ಆಂಧ್ರಪ್ರದೇಶದಿಂದ ಬಂದು ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಕಂಧಾರ ಗ್ರಾಮದಲ್ಲಿ ವಾಸಿಸುತ್ತಿದ್ದಳು. ಈಕೆಯ ಪತಿ ಪೆದ್ದಯ್ಯ ಸುಪ್ರಸಿದ್ಧ ಕಳ್ಳ, ಉರಿಲಿಂಗದೇವನ ಪ್ರಭಾವದಿಂದ ಶರಣನಾಗಿ ಉರಿಲಿಂಗ ಪೆದ್ದಿಯಾದ.ಪತಿಯನ್ನನುಸರಿಸಿ ಈಕೆಯೂ ಶರಣೆಯಾದಳು.

12ನೇ ಶತಮಾನದ ಪ್ರಸಿದ್ಧ ವಚನಕಾರ್ತಿಯರಿಗೆ ಸರಿಮಿಗಿಲೆನಿಸುವಂತೆ ವಚನಗಳನ್ನು ರಚಿಸಿರುವುದಲ್ಲದೆ ತನ್ನ ಪತಿಯ ಜೊತೆಯಲ್ಲಿ ಶಿವಾನುಭವ ಪ್ರಚಾರ ಕಾರ್ಯದಲ್ಲಿ ನಿರಂತರ ನೆರವಾದಳು.

ಅಸ್ಪೃಶ್ಯರೆನಿಸಿದ್ದ ಈ ಸತಿ ಪತಿಯರು, ಶಿವಾನುಭವವನ್ನು ಪಡೆದ ಮೇಲೆ ಶ್ರೇಷ್ಠ ಜ್ಞಾನಿಗಳೆನಿಸಿಕೊಂಡರು. ಈಕೆ ರಚಿಸಿದ ಎಲ್ಲ ವಚನಗಳೂ ಸಿಕ್ಕಿಲ್ಲ, ಸಿಕ್ಕ 12 ವಚನಗಳಲ್ಲಿ ಕಾಣುವ ಪಾಂಡಿತ್ಯ, ಅನುಭವ, ನಿಷ್ಠೆ, ತತ್ತ್ವಜ್ಞಾನದ ತಿಳುವಳಿಕೆ, ಗೃಹಿಣಿಯಲ್ಲಿರಬೇಕಾದ ಸದ್ಗುಣಗಳ ವಿವರ ಈಕೆಯನ್ನು ಶ್ರೇಷ್ಠ ವಚನಕಾರ್ತಿಯಾಗಿಸಿವೆ.12ನೇ ಶತಮಾನದಲ್ಲಿ ಕಾಣುವ ಅಪೂರ್ವ ಸತಿಪತಿ ಜೋಡಿಗಳಲ್ಲಿ ಇವರದೂ ಒಂದು.

ಭಕ್ತನ ಲಕ್ಷಣ, ವ್ರತಾಚರಣೆಯ ಮಹತ್ವ, ಪ್ರಸಾದ ಮಹಿಮೆ, ಕಾಯಕ ನಿಷ್ಠೆ ಈಕೆಯ ವಚನಗಳಲ್ಲಿ ಕಂಡು ಬರುವ ಮುಖ್ಯ ವಿಷಯಗಳು. ಈಕೆ ದಲಿತ ವಚನಕಾರ್ತಿ, ಈಕೆಯ ಪತಿ ಉರಿಲಿಂಗಪೆದ್ದಿಯು ಕನ್ನಡದ ಶ್ರೇಷ್ಠ ಅನುಭಾವಿ ವಚನಕಾರ. ಕೆಳವರ್ಗಕ್ಕೆ ಸೇರಿದ ಈತ ಉರಿಲಿಂಗದೇವರ ಕೃಪೆಗೆ ಪಾತ್ರನಾಗಿ ಕೊರಳಿಮಠದ ಪಟ್ಟವನ್ನು ವಹಿಸಿದ್ದು ಅತ್ಯಂತ ಮಹತ್ವದಾಗಿದೆ.

### ಕಾಯಕದ ಮಹತ್ವ ತಿಳಿಸಿದ ಕಾಳವ್ವೆ

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯಶುದ್ಧವಿಲ್ಲದುದು ಕಾಯಕವಲ್ಲ
ಆಸೆಯೆಂಬುದು ಭವದ ಬೀಜ
ನಿರಾಸೆಯೆಂಬುದು ನಿತ್ಯ ಮುಕ್ತಿ

ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ .

ಈ ವಚನದಲ್ಲಿ ಸತ್ಯಶುದ್ಧವಾದ ಕಾಯಕದ ವ್ಯಾಖ್ಯಾನವಿದೆ.ಶಿವಶರಣರು ಕಾಯಕ ಮತ್ತು ದಾಸೋಹ ಎಂಬ ಎರಡು ಮಹೋನ್ನತ ಮೌಲ್ಯಗಳನ್ನು ಪ್ರತಿಪಾದಿಸಿರುವುದು. ಐತಿಹಾಸಿಕ ಸತ್ಯವಾಗಿದೆ. ಸಮಾಜೋಧಾರ್ಮಿಕ ಆಂದೋಲನದಲ್ಲಿ ಪಾಲ್ಗೊಂಡ ಕಾಳವ್ವೆ ವಚನ ಚಳುವಳಿಗೆ ಪೂರಕವಾದ ಸಿದ್ಧಾಂತ ಪ್ರತಿಪಾದಿಸಿರುವುದು ಗಮನಾರ್ಹವಾಗಿದೆ.

### ವ್ರತದ ಅರ್ಥ, ಮಹತ್ವ ತಿಳಿಸಿದ ಕಾಳವ್ವೆ

ವ್ರತವೆಂಬುದು ನಾಯಕ ರತ್ನ<br>
ವ್ರತವೆಂಬುದು ಸುಪ್ಪಾಣಿಯ ಮುತ್ತು<br>
ವ್ರತವೆಂಬುದು ಜೀವನ ಕಳೆ<br>
ವ್ರತವೆಂಬುದು ಸುಯಿದಾನ<br>
ವ್ರತ ತಪ್ಪಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ

ವ್ರತವನ್ನು ನಾಯಕರತ್ನ, ಸುಪ್ಪಾಣಿಯ ಮುತ್ತು, ಜೀವನ ಕಳೆ, ಸುಯಿದಾನ ಎಂದು ನಾಲ್ಕು ಪ್ರಕಾರದಲ್ಲಿ ವಿವರಿಸಿದ್ದಾಳೆ. ವ್ರತವು ತುಂಬ ಮಹತ್ವದ್ದಾಗಿದೆ.ಜೀವನದ ಕಳೆಯಾಗಿದೆ, ಸುಪ್ಪಾಣಿಯೇ ತಾನಾಗಿದೆ, ಅದಕ್ಕಾಗಿ ವ್ರತ ತಪ್ಪಿಸಬಾರದು,ಚಾಚೂ ತಪ್ಪದೆ ಆಚರಿಸಬೇಕು. ವ್ರತ ತಪ್ಪಿದರೆ ಇಷ್ಟದೈವ ಮೆಚ್ಚಿಗೆಯಾಗುವುದಿಲ್ಲ.

ಶಿವಭಕ್ತರು ವ್ರತ ಪಾಲಿಸಬೇಕೆಂದು ಮತ್ತೊಂದು ವಚನದಲ್ಲಿ ಹೇಳಿದ್ದಾಳೆ.

ವ್ರತ ಹೋದಾಗಳೆ ಇಷ್ಟಲಿಂಗದ ಕಳೆ ನಷ್ಟನವ್ವಾ<br>
ಅವರು ಲಿಂಗವಿದ್ದೂ ಭವಿಗಳು<br>
ಅದು ಹೇಗೆಂದಡೆ; ಪ್ರಾಣವಿಲ್ಲದ ದೇಹದಂತೆ<br>
ಉರಿಲಿಂಗಪೆದ್ದಿಗಳರಸ ಬಲ್ಲನೊಲ್ಲನವ್ವಾ

ವ್ರತಹೋದರೆ ಇಷ್ಟಲಿಂಗ ಕಳೆಗುಂದುವುದು, ಲಿಂಗವಿದ್ದರೂ ವ್ರತವಿಲ್ಲದಿದ್ದರೆ ಅವರು ಭವಿಗಳಿದ್ದಂತೆ. ವ್ರತ ದೇಹದೊಳಗಿರುವ ಪ್ರಾಣವಿದ್ದಂತೆ, ಪ್ರಾಣವಾಯುವಿದ್ದಂತೆ. ವ್ರತವಿಲ್ಲದವರು ಪ್ರಾಣವಿಲ್ಲದ ದೇಹದಂತೆ ಎಂದು ಹೋಲಿಕೆ ನೀಡಿದ್ದು ವ್ರತಕ್ಕಿರುವ ಮಹತ್ವವನ್ನು ಕಾಳವ್ವೆ ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾಳೆ.

### ಪ್ರಸಾದದ ಮಹತ್ವ ತಿಳಿಸಿದ ಕಾಳವ್ವೆ

ಕಾಯಕದಲ್ಲಿ ಪದ ಪಡಿಯು ಪದಾರ್ಥವಾಗಿ ಪ್ರಸಾದ ರೂಪ ಪಡೆಯುತ್ತದೆ. ದುಡಿಯದೆ ಬಿಟ್ಟಿಯಾಗಿ ತಿನ್ನುವುದು ಪ್ರಸಾದವಾಗುವುದಿಲ್ಲ.ತನ್ನ ಪರಿಶ್ರಮವಿಲ್ಲದ ಅನ್ನ ಪ್ರಸಾದವಾಗದು ಎಂಬುದನ್ನು ವಿವರಿಸುತ್ತಾ ಕಾಳವ್ವೆ ಹೇಳಿದ ಅಂಶ ಮಹತ್ತರವಾಗಿದೆ.

ಉಂಡೊಡೆಯರಲ್ಲಿ ಕೊಂಬ ಪ್ರಸಾದ ಕಾರಿದಕೊಳು



ಸಣ್ಣವರಲ್ಲಿ ಕೊಂಬ ಪ್ರಸಾದ ಸಂತೆಯ ಸೂಳೆಯ ಎಂಜಲು<br>
ಅಳಿಯನ್ನಲ್ಲಿ ಕೊಂಬ ಪ್ರಸಾದ ಅಮೇಧ್ಯ<br>
ಮಕ್ಕಳಲ್ಲಿ ಕೊಂಬ ಪ್ರಸಾದ ಗೋಮಾಂಸ<br>
ತಮ್ಮನಲ್ಲಿ ಕೊಂಬ ಪ್ರಸಾದ ಸಿಂಗಿ<br>
ನಂಟರಲ್ಲಿ ಕೊಂಬ ಪ್ರಸಾದ ನರಮಾಂಸ<br>
ವಂದಿಸಿ ನಿಂದಿಸಿ ಕೊಂಬ ಪ್ರಸಾದವ<br>
ಉರಿಲಿಂಗಪೆದಿಗಳರಸನೊಲ್ಲನವ್ವಾ.

ಒಡೆಯರಲ್ಲಿ, ಸಂಬಂಧಿಕರಲ್ಲಿ, ಬಂಧು-ಬಾಂಧವರಲ್ಲಿ ಸಣ್ಣವರಲ್ಲಿ ಹೀಗೆ ಯಾರಲ್ಲೂ ಪ್ರಸಾದಕೊಳ್ಳಬಾರದು. ಹಾಗೆ ಕೊಂಬ ಪ್ರಸಾದ, ಪ್ರಸಾದವಾಗದೆ ಮತ್ತೇನೋ ಆಗಿಬಿಡುತ್ತದೆ. ವಂದಿಸಿ, ನಿಂದಿಸಿ ಕೊಂಬ ಪ್ರಸಾದ ಶಿವಾರ್ಪಿತವಲ್ಲ,ಅಂತಹದನ್ನು ಲಿಂಗ ಒಪ್ಪುವುದಿಲ್ಲ. ಇಷ್ಟದೈವ ಮೆಚ್ಚಬೇಕಾದರೆ ತನ್ನ ಸ್ವಂತ ಪರಿಶ್ರಮದಿಂದ ಬಂದಿರಬೇಕು.ಸತ್ಯಶುದ್ಧವಾದ ಕಾಯಕದಿಂದ ಬಂದುದು ಪ್ರಸಾದವಾಗಿ ಸ್ವೀಕೃತವಾಗುತ್ತದೆ.

### ವೈಚಾರಿಕ ಪ್ರಜ್ಞೆ ತೋರಿದ ಕಾಳವ್ವೆ

ಅಜ್ಞಾನ, ಅಂಧಾನುಕರಣೆ, ಜೀವವಿರೋಧಿ ನಿಲುವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾಳೆ. ಪುರೋಹಿತಶಾಹಿಗಳ ಕುತಂತ್ರವನ್ನು ಬಯಲಿಗೆಳೆದ ಧೀರೆಯವಳು.

ಶೂದ್ರರು ಕಲಿಯಬಾರದು, ದಲಿತರು ಸಂಸ್ಕೃತವನ್ನು ಕಿವಿಯಿಂದ ಕೇಳಬಾರದು, ನಾಲಿಗೆಯಿಂದ ಉಚ್ಚರಿಸಬಾರದು ಎಂಬ ಸಮಾಜದ ಕಟ್ಟಳೆಯಿದ್ದ ಕಾಲದಲ್ಲಿ ಪುರೋಹಿತಶಾಹಿಗಳ ಅಹಂಕಾರ ಮತ್ತು ಅಟ್ಟಹಾಸವನ್ನು ಕಾಳವ್ವೆ ಮಟ್ಟಹಾಕಿದ್ದು ಅವಳ ಧೈರ್ಯ,ಸ್ಥೈರ್ಯ ಹಾಗೂ ವೈಚಾರಿಕತೆಯ ಏರೆತ್ತರಕ್ಕೂ ಸಾಕ್ಷಿಯಾಗಿದೆ.

### ವ್ರತ, ಲಿಂಗ ನಿಷ್ಠೆಯ ಕೇತಲದೇವಿ

ವ್ರತನಿಷ್ಠೆ, ಲಿಂಗನಿಷ್ಠೆ, ಕಾಯಕದ ಮೂಲಕ ಜನಮಾನಸದಲ್ಲಿ ಅಚ್ಚಳಿಯದೇ ಉಳಿದ ಶ್ರೇಷ್ಠ ವಚನಕಾರ್ತಿ ಕೇತಲಾದೇವಿ.

ಕುಂಬಾರ ಗುಂಡಯ್ಯನ ಪತ್ನಿಯಾದ ಕೇತಲಾದೇವಿ ಬೀದರ್ ಜಿಲ್ಲೆಯ ಬಾಲ್ಕಿ ಗ್ರಾಮದವಳು. ಕುಂಭೇಶ್ವರ ಅಥವಾ ಕುಂಭೇಶ್ವರಲಿಂಗ ಎಂಬ ಅಂಕಿತದೊಂದಿಗೆ ವಚನಗಳನ್ನು ರಚಿಸಿದ್ದಾಳೆ. ಸದ್ಯ ನಮ್ಮಗೆ ಕೇತಲಾದೇವಿಯ ಎರಡು ವಚನಗಳು ದೊರಕಿವೆ.ಕೇತಲಾದೇವಿ ವಚನಗಳಲ್ಲಿ ವ್ರತ, ಕಾಯಕ, ಲಿಂಗ ನಿಷ್ಠೆಯ ಮಹತ್ವ ತಿಳಿಸಿದ್ದಾಳೆ

### ವ್ರತ, ಕಾಯಕ ನಿಷ್ಠೆಯ ಮಹತ್ವ

ಹದ ಮಣ್ಣಲ್ಲದೆ ಮಡಿಕೆಯಾಗಲಾರದು<br>
ವ್ರತಹೀನನ ಬೆರೆಯಲಾಗದು

ಬೆರೆದಡೆ ನರಕ ತಪ್ಪದು
ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ !

ಮಡಿಕೆ ಮಾಡಲು ಮಣ್ಣು ಹದವಾಗಿರಬೇಕು.ಹದದ ಮಣ್ಣಿನಿಂದ ಮಾಡಿದ ಮಡಿಕೆ ಹೆಚ್ಚು ಕಾಲ ಬಾಳಿಕೆ ಬರುತ್ತದೆ. ವ್ರತನಿಷ್ಠೆ ಜೀವನದಿಂದ, ವ್ರತನಿಷ್ಠರ ಸಹವಾಸದಿಂದ ಇಂತಹ ಹದವನ್ನು ಸಾಧಿಸಬಹುದು. ವ್ರತಭ್ರಷ್ಟರ ಸಂಪರ್ಕದಿಂದ ಹದ ತಪ್ಪುತ್ತದೆ,ನರಕ ಪ್ರಾಪ್ತಿಯಾಗುತ್ತದೆ.ಆದ ಕಾರಣ ವ್ರತಹೀನರನ್ನು ನಾನೊಲ್ಲೆ ಎಂದಿದ್ದಾಳೆ.

## ಲಿಂಗನಿಷ್ಠೆಯ ಮಹತ್ವ

ಲಿಂಗವಂತರ ಲಿಂಗಾಚಾರಿಗಳ ಅಂಗಳಕ್ಕೆ ಹೋಗಿ
ಲಿಂಗಾರ್ಪಿತವ ಮಾಡುವಲ್ಲಿ ಸಂದೇಹವಿಲ್ಲದಿರಬೇಕು
ಅದೆಂತೆಂದಡೆ

ಭಿಕ್ಷ ಲಿಂಗಾರ್ಪಿತಂ ಗತ್ವಾ ! ಭಕ್ತಸ್ಯ ಮಂದಿರಂ ತಥಾ
ಜಾತಿ ಜನ್ಮ ರಜೋಚ್ಚಿಷ್ಟಂ ! ಪ್ರೇತಸ್ಯ ವಿವರ್ಜಿತ:
ಕಾಣದುದನೆ ಚರಿಸದೆ,ಕಂಡುದನು ನುಡಿಯದೆ
ಕಾಣದುದನುಕಂಡುದದನು ಒಂದೇ ಸಮವೆಂದು ಅರಿಯಬಲ್ಲರೆ
ಕುಂಭೇಶ್ವರಲಿಂಗವೆಂಬೆ

ಲಿಂಗವಂತರ ಬಗ್ಗೆ ಮಾತನಾಡುವ ಕೇತಲದೇವಿ ಲಿಂಗಾಚಾರಿಗಳ ಅಂಗಳಕ್ಕೆ ಹೋಗಿ ಲಿಂಗಾರ್ಪಿತವ ಮಾಡುವಲ್ಲಿ ಸಂದೇಹವಿಲ್ಲದಿರಬೇಕು.ಕಾಣದುದನ್ನು ಕಂಡುದನ್ನು ನುಡಿಯದೆ ಎಲ್ಲವನ್ನು ಒಂದೇ ಸಮವೆಂದು ಅರಿಯಬೇಕು.ಆಚಾರವಂತ ಸದಾಚಾರಿಯ ಮನೆಗೆ ಹೋದರೆ ಯಾವ ಸೂತಕವನ್ನು ಎಣಿಸಬಾರದೆಂಬ ನಿಲವನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ.

ಈ ವಚನದಲ್ಲಿ ಕೇತಲಾದೇವಿ ಸಂಸ್ಕೃತ ವಾಕ್ಯವನ್ನು ಬಳಸಿರುವುದು ವಿಶೇಷ.ಇದರಿಂದಾಗಿ ಸಂಸ್ಕೃತ ಭಾಷೆ ಬಲ್ಲವಳಾಗಿದ್ದಳು ಎಂಬುದು ತಿಳಿದು ಬರುವುದು. ಕೇತಲದೇವಿಯ ಲಿಂಗನಿಷ್ಠೆಯನ್ನು ತಿಳಿಸುವ ಒಂದು ಪ್ರಸಂಗ ಕವಿ ಬಸವಲಿಂಗ ವಿರಚಿತ ಬಸವಪುರಾಣದಲ್ಲಿ ಪ್ರಸ್ತಾಪಿತವಾಗಿದೆ. ಶಿವಭಕ್ತೆ ಕೇತಲಾದೇವಿ ನಿತ್ಯ ತಾನು ಪೂಜಿಸುವ ಲಿಂಗಕ್ಕೆ ಹೊಸವಸ್ತ್ರ ಹಾಕುವ ನಿಯಮವಿರಿಸಿಕೊಂಡಿದ್ದಳು. ಒಂದು ದಿನ ಹೊಸ ಪವಾಡ ಸಿಗದೆ ತನ್ನ ಎದೆಯ ಚರ್ಮವನ್ನೇ ತೆಗೆದು ಪಾವಡದಂತೆ ಲಿಂಗಕ್ಕೆ ಅರ್ಪಿಸಿ, ಶಿವನ ಕೃಪೆಗೆ ಪಾತ್ರಳಾದಳೆಂಬ ಉಲ್ಲೇಖ ಕಂಡು ಬರುತ್ತದೆ.

*****



# ಲಿಂಗಾಯತವು ಹಿಂದುದೊಳಗಣ ಸಂಪ್ರದಾಯವಲ್ಲ ಪ್ರತ್ಯೇಕ

– ಮಾತಾಜಿ

ಗುರು ಬಸವಣ್ಣನವರು 12ನೇ ಶತಮಾನದಲ್ಲಿ ಸ್ಥಾಪಿಸಿದ ಲಿಂಗಾಯತವು ಹಿಂದು ಧರ್ಮದೊಳಗಿನ ಒಂದು ಸಂಪ್ರದಾಯವಲ್ಲಿ ಇದು ಪ್ರತ್ಯೇಕ ಧರ್ಮ. ಪೇಜಾವರ ಶ್ರೀಗಳಿಗೆ ವೀರಶೈವ ಮತ್ತು ಲಿಂಗಾಯತದ ನಡುವೆ ಇರುವ ವ್ಯತ್ಯಾಸವೇ ತಿಳಿದಿಲ್ಲ.ವೀರಶೈವವು ಶೈವ ಧರ್ಮದಲ್ಲಿನ ಒಂದು ಪಂಥ.ವೀರ ಭಕ್ತಿಯಿಂದ ಶಿವನನ್ನು ಆರಾಧಿಸುವವನೇ ವೀರಶೈವ. ಅದ್ದರಿಂದ ಅದು ಹಿಂದು ಧರ್ಮದ ಒಂದು ಭಾಗ. ವೇದ ಆಧಾರಿತ ವೈದಿಕ ಮತ್ತು ಆಗಮ ಆಧಾರಿತ ಶೈವ ಇವರೆಡು ಹಿಂದು ಧರ್ಮದೊಳಗಿನ ಎರಡು ಪರಂಪರೆಗಳು.

ಶಿವನನ್ನು ಆರಾಧಿಸುವ ವೀರಶೈವವು ಹಿಂದೂ ಧರ್ಮದೊಳಗಣ ಒಂದು ಸಂಪ್ರದಾಯ ಎಂದು ಪೇಜಾವರ ಶ್ರೀಗಳು ಪ್ರತಿಪಾದಿಸಿದರೆ ಅದಕ್ಕೆ ನಮ್ಮ ಸಮ್ಮತಿ ಇದೆ.ಆದರೆ ಲಿಂಗಾಯತವು ಶಿವನ ಪೂಜಕವಾದ ಮಾರ್ಗವಲ್ಲ. ಇದು ಪೂಜಿಸ ಹೇಳುವುದು ನರಾಕಾರನು, ನಿರ್ಗುಣನೂ ಆದ ಸೃಷ್ಟಿಕರ್ತನನ್ನು. ಶಿವನ ಕುರುಹಾದ ಸ್ಥಾವರ ಲಿಂಗಕ್ಕೂ ದೇವರ ಕುರುಹಾದ ಇಷ್ಟಲಿಂಗಕ್ಕೂ ಅಗಾಧವಾದ ವ್ಯತ್ಯಾಸವಿದೆ.

12ನೇ ಶತಮಾನದಲ್ಲಿ ಬಸವಣ್ಣನವರು ಬ್ರಾಹ್ಮಣ ಕುಲದಲ್ಲಿ ಹುಟ್ಟಿದರೂ ವೈದಿಕ ಧರ್ಮದ ಕೆಲವು ನಂಬಿಕೆ, ಆಚರಣೆಗಳು, ಸಂಪ್ರದಾಯ, ಜಾಡ್ಯತೆ ಮುಂತಾದವುಗಳಿಂದ ಬೇಸತ್ತು ಅದರಿಂದ ಹೊರಬಂದು ಇಷ್ಟಲಿಂಗ ಆಧಾರಿತವಾದ ಲಾಂಛನವನ್ನು ರೂಪಿಸಿ ಸಮತಾವಾದಿ ಸಮಾಜವನ್ನು ಕಟ್ಟಿದರು.

ಪೇಜಾವರ ಶ್ರೀಗಳು ರಾಮಕೃಷ್ಣ ಆಶ್ರಮ, ಆರ್ಯ ಸಮಾಜಗಳ ಉದಾಹರಣೆ ನೀಡಿ ಇವು ಸಹ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡಿಲ್ಲ ಆದರೆ ಇವು ಹಿಂದೂ ಧರ್ಮದ ಹೊರಗೆ ಹೋಗಿಲ್ಲ ಎಂದು ಹೇಳಿದ್ದಾರೆ. ಈ ಹಿಂದು ಪಂಥಗಳು ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡಿಲ್ಲವಾದರೂ ಇವರು ವೇದಗಳನ್ನು ಮಾನ್ಯ ಮಾಡುತ್ತಾರೆ, ಹೋಮ ಹವನಾದಿಗಳನ್ನು ಆಚರಿಸುತ್ತಾರೆ. ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯವು ವೇದಕ್ಕೆ ಒರೆಯಕಟ್ಟಿ,ಶಾಸ್ತ್ರಕ್ಕೆ ನಗಳನಕ್ಕಿ ಆಗಮದ ಮೂಗಕೊಯ್ದು ಶಾಸ್ತ್ರದಾಸ್ಯದಿಂದ ಹೊರಗೆ ಬಂದಿದೆ. ಅಗ್ನಿಯನ್ನು ದೇವರೆಂದು ವೈದಿಕ ಹಿಂದೂ ಧರ್ಮವು ಆರಾಧಿಸಿದರೆ.ಕಿಚ್ಚು ದೈವವೆಂದು ಆರಾಧಿಸುವವರನ್ನು ವಚನ ಶಾಸ್ತ್ರ ಟೀಕಿಸುತ್ತದೆ. ವರ್ಣವ್ಯವಸ್ಥೆ, ಜಾತಿ ಪದ್ದತಿ, ಅಸ್ಪೃಶ್ಯತೆಯನ್ನು ತೀವ್ರವಾಗಿ ಲಿಂಗಾಯತ ಧರ್ಮ ವಿರೋಧಿಸುತ್ತದೆ.

ಹಿಂದು ಧರ್ಮದಿಂದ ಲಿಂಗಾಯತವು ಹೊರಗೆ ಹೋಗಬಾರದು ಎಂಬ ಪೇಜಾವರ ಶ್ರೀಗಳ ಆಶಯದಲ್ಲಿ ತುಂಬಾ ಕಳಕಳಿ ಇರುವುದನ್ನು ನಾವು ಗುರುತಿಸಲೇಬೇಕು. ಆದರೆ ನಾವೂ ಒಂದು ಬಗೆಯ ಕಳಕಳಿ, ಕಳವಳದಿಂದಲೇ ಲಿಂಗಾಯತವು ಸ್ವತಂತ್ರ ಧರ್ಮವಾಗಿ ಸಾಂವಿಧಾನಕ ಮಾನ್ಯತೆ ಪಡೆಯಲೇ ಬೇಕೆಂದು ಚಳುವಳಿಯನ್ನು ಮಾಡುತ್ತಿರುವುದು.

ಲಿಂಗಾಯತವು ತಾವು ಹಿಂದುಗಳೆಂಬ ತಪ್ಪು ಭ್ರಾಂತಿಯಿಂದ ತಮ್ಮ ಧರ್ಮಗುರು ಬಸವಣ್ಣನವರ ಆಶಯ,ಆದೇಶಕ್ಕೆ ವಿರುದ್ದವಾಗಿ ಹೋಮ ಹವನಾದಿಗಳನ್ನು ಗೃಹ ಪ್ರವೇಶ ಸಮಯದಲ್ಲಿ ಮಾಡಿಸುತ್ತಿದ್ದಾರೆ. ಜ್ಯೋತಿಷ್ಯ, ವಾಸ್ತುಗಳನ್ನು ನಂಬುತ್ತಿದ್ದಾರೆ.ಬಹುದೇವತಾ ಉಪಾಸನೆ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಅಸ್ಪೃಶ್ಯತೆ ಆಚರಿಸುತ್ತಿದ್ದಾರೆ. ಇವರಿಗೆ

ತಾವು ಹಿಂದುಗಳಲ್ಲ ಲಿಂಗಾಯತವು ಕ್ರಾಂತಿಕಾರಿಯಾದ ಸ್ವತಂತ್ರ ಧರ್ಮ ತಾವೂ ಅದರ ಅನುಯಾಯಿಗಳು ಎಂಬ ಅರಿವು ಉಂಟಾದರೆ ಅದರಿಂದ ಮಹದುಪಕಾರವಾಗುವುದು. ಈಗ ಲಿಂಗಾಯತವು ಹಿಂದು ಧರ್ಮದೊಳಗೆ ಒಂದು ಜಾತಿಯಾಗಿ, ಸಂಪ್ರದಾಯವಾಗಿ ತನ್ನ ಮಹತ್ವವನ್ನು ಕಳೆದುಕೊಂಡಿದೆ. ಇದು ಸ್ವತಂತ್ರ ಧರ್ಮವೆಂಬ ಸಾಂವಿಧಾನಿಕ ಮಾನ್ಯತೆ ಪಡೆದರೆ ಇಂಥದೊಂದು ಪ್ರಗತಿಪರ ಧರ್ಮವು ಇದೆ ಎಂಬ ಮಾಹಿತಿಯು ಇಡೀ ಭಾರತಕ್ಕೆ ಗೊತ್ತಾಗುವುದಲ್ಲದೆ ಇದು ಜಾಗತಿಕ ಧರ್ಮಗಳ ಸಾಲಿನಲ್ಲಿ ಮಾನ್ಯತೆ ಪಡೆಯುವುದು. ಆದ್ದರಿಂದ ಈ ಸಂದರ್ಭದಲ್ಲಿ ಪೇಜಾವರ ಶ್ರೀಗಳಲ್ಲಿ ನಮ್ಮ ವಿನಂತಿ ಏನೆಂದರೆ ಅವರು ನರೇಂದ್ರ ಮೋದಿಯವರಿಗೆ ಚಿರಪರಿಚಿತರು. ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ಕೊಡಿಸಲೂ ಅವರೂ ಕೂಡ ಪ್ರಭಾವ ಬೀರಲಿ ಎಂಬುದಾಗಿದೆ.

### ಚಕ್ರವರ್ತಿ ಸೂಲಿಬೆಲೆಯವರದು ತಾತ್ತ್ವಿಕ ಚಿಂತನೆಯ ಭೇಟಿ

ಹಿಂದು ಅಭಿಮಾನಿ ಕಾರ್ಯಕರ್ತರಾದ ಚಕ್ರವರ್ತಿ ಸೂಲಿಬೆಲೆ ಅವರು ಬೆಂಗಳೂರಿನ ಬಸವ ಮಂಟಪಕ್ಕೆ ಆಗಮಿಸಿ ನಮ್ಮನು ಭೇಟಿಯಾಗಿದ್ದು ತಾತ್ತ್ವಿಕ ಚಿಂತನೆಯ ಭೇಟಿ.

ಸೂಲಿಬೆಲೆಯವರು ನಮ್ಮೊಡನೆ ಚರ್ಚೆಯಲ್ಲಿ ತೊಡಗಿದ್ದು ಸಾಮಾಜಿಕ ಜಾಲತಾಣದಲ್ಲಿ ಪ್ರಚಾರಗೊಂಡು ನಾನಾ ಊಹಾ ಪೋಹಗಳಿಗೆ ಕಾರಣವಾಗಿದೆ ಎಂದು ತಿಳಿದು ಬಂದಿದೆ. ಅವರು ಯುವ ಬ್ರಿಗೇಡ್ ಎಂಬ ಯುವಶಕ್ತಿಯ ಸಂಘಟನೆಯ ಮೂಲಕ ಆಗಾಗ ಮಹೋನ್ನತ ಸಾಧನೆ ಮಾಡಿದ ವ್ಯಕ್ತಿಗಳ ತೌಲನಿಕ ಅಧ್ಯಯನ ಮಾಡುತ್ತಿದ್ದಾರೆ. ನಮ್ಮ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತ ಪಂಚಾಕ್ಷರಿ ಎಂಬುವವರು ಕನ್ನಡ ನಾಡಿನ ಶರಣರ ಸಾಧನೆ ಕುರಿತು ಚಿಂತನೆ ಏರ್ಪಡಿಸಿ ಎಂದು ಸೂಲಿಬೆಲೆಯವರಿಗೆ ಪ್ರೇರಣೆ ನೀಡಿದಾಗ ಅದರ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ನಮ್ಮ ಬಳಿ ಬಂದರು.

ಇದು ಒಂದು ಸೌಹಾರ್ದಯುತ ಭೇಟಿಯಾಗಿತ್ತು ಉಭಯತರ ಮಧ್ಯೆ ತಾತ್ತ್ವಿಕವಾದ ಚಿಂತನೆ ನಡೆಯಿತು. ವಿವಿಧ ಸಂಘಟನೆಗಳವರು ತಪ್ಪು ಕಲ್ಪನೆಗಳಿಂದ ಪರಸ್ಪರ ದೂರವಿರುವುದಕ್ಕಿಂತಲೂ ಪ್ರತ್ಯಕ್ಷವಾಗಿ ಭೇಟಿಯಾಗಿ ಸಂದೇಹವನ್ನು, ತಪ್ಪುಕಲ್ಪನೆಯನ್ನು ದೂರಮಾಡಿಕೊಳ್ಳುವುದು ಸೂಕ್ತ ಎಂಬುದು ನಮ್ಮ ಅವರ ಅನುಭವಕ್ಕೆ ಬಂದಿತು ಎಂದರು.

### ವೀರಶೈವ ಮಹಾಸಭೆಯನ್ನು ಬಹಿಷ್ಕರಿಸಲು ಕರೆ

ಬಹಿರಂಗ ಸಭೆಯಲ್ಲಿ ಒಂದು ನಿಲುವು, ಗೋಪ್ಯ ಸಭೆಗಳಲ್ಲಿ ಮತ್ತೊಂದು ನಿಲುವು ಹೀಗೆ ದ್ವಂದ್ವ ನಿಲುವನ್ನು ವ್ಯಕ್ತಪಡಿಸುತ್ತಿರುವ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಬಹಿಷ್ಕರಿಸಿ ಬಸವ ತತ್ತ್ವ ನಿಷ್ಠರು ಮಹಾಸಭೆಯ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಹೊರಬರಬೇಕು.

ಬಸವ ವಚನ ದೀಪ್ತಿ ಪುಸ್ತಕ ಕುರಿತಾಗಿ ಸುಪ್ರೀಂ ಕೋರ್ಟ ದಾವೆಯಲ್ಲಿ ವೀರಶೈವ ಮಹಾಸಭೆ ವಾದ ಮಂಡಿಸುತ್ತ ಲಿಂಗಾಯತ ಧರ್ಮದ ಸ್ಥಾಪಕರು



ಬಸವಣ್ಣನವರು, ಕುರಾನ್, ಬೈಬಲ್, ಭಗವದ್ಗೀತೆಯಂತೆ ವಚನ ಸಾಹಿತ್ಯ ಲಿಂಗಾಯತ ಧರ್ಮದ ಆಧಾರ ಸಾಹಿತ್ಯ ಎಂದು ಹೇಳಿದ್ದಾರೆ. ಆದರೆ ಇದೀಗ ವಚನ ಸಾಹಿತ್ಯದ ಸಾಚಾತನವನ್ನು ಪ್ರಶ್ನಿಸಿದ್ದಾರೆ.

ವಚನ ಪಿತಾಮಹ ಫ.ಗು.ಹಳಕಟ್ಟಿಯವರು ಲಿಂಗಾಯತ ಸಮಾಜದಲ್ಲಿ ಯಾವುದೇ ಸಂದೇಹ, ಗೊಂದಲ, ಪೂರ್ವಾಗ್ರಹ ಪೀಡಿತ ದೃಷ್ಟಿಕೋನ ಇಲ್ಲದಿರುವಾಗ ವಚನ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಲು ತೊಡಗಿದರು.

ವೀರಶೈವ ಮಹಾಸಭೆಯ ಪುಟ್ಟಬುದ್ದಿಯನ್ನೇ ಹೊಂದಿರುವ ಮೈಸೂರಿನ ಕೆ.ಎಸ್.ಪುಟ್ಟಬುದ್ದಿ ಹಳಕಟ್ಟಿಯವರು ಸಂಗ್ರಹಿಸಿರುವ ವಚನಗಳನ್ನು ಒರೆಗೆ ಹಚ್ಚುವ ಅವಶ್ಯಕತೆ ಇದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದು,ಇದನ್ನು ಬೆಂಗಳೂರು ದಕ್ಷಿಣ ತಾಲ್ಲೂಕು ಘಟಕದ ಅಧ್ಯಕ್ಷ ಗಿರೀಶ ದಿಬ್ಬೂರು ಅವರು ಅನುಮೋದಿಸಿದ್ದಾರೆ.

ಇಂಥ ಕುಚೋದ್ಯದ ಪ್ರತಿಪಾದನೆಗೆ ಇವರು ಕೊಟ್ಟ ಆಧಾರವೇನೆಂದರೆ ಅನುಭವ ಮಂಟಪದಲ್ಲಿದ್ದ ಶರಣರು ವಿದ್ಯಾವಂತರಾಗಿರಲಿಲ್ಲ ಅವರೆಲ್ಲ ನಿಮ್ನ ವರ್ಗದಿಂದ ಬಂದ ಶ್ರಮಿಕರಾಗಿದ್ದರು. ಆ ಕಾಲದಲ್ಲಿ ಅವರಿಗೆ ತಾಡೋಲೆಗಳಲ್ಲಿ ಬರೆಯುವುದು ಎಷ್ಟರ ಮಟ್ಟಿಗೆ ಗೊತ್ತಿತ್ತು ಎಂಬುದೇ ಆಶ್ಚರ್ಯ ಎಂದಿದ್ದಾರೆ

ಯಾರಿಗೆ ವಿದ್ಯೆ, ಧಾರ್ಮಿಕ ಸಂಸ್ಕಾರ, ಸಾಮಾಜಿಕ ಸ್ಥಾನಮಾನ ಇರಲಿಲ್ಲವೋ ಅವರಿಗೆ ಅವೆಲ್ಲವುಗಳನ್ನು 12ನೆಯ ಶತಮಾನದಲ್ಲೇ ಒದಗಿಸಿ ಕೊಟ್ಟು ಸರ್ವಾಂಗೀಣವಾಗಿ ಅವರನ್ನು ಮೇಲಕ್ಕೆತ್ತಿದ ಶ್ರೇಯಸ್ಸು ಬಸವಣ್ಣನವರದು.

ಅನುಭವ ಮಂಟಪದಲ್ಲಿ ಅನೇಕ ವಿಷಯಗಳು ಸಂವಾದ ರೂಪದಲ್ಲಿ ಚರ್ಚಿತವಾಗುತ್ತಿದ್ದವು. ಅವುಗಳನ್ನು ವಚನ ಭಂಡಾರಿ ಶಾಂತರಸರು ಸಂಗ್ರಹಿಸಿದ ನಂತರ ಚನ್ನಬಸವಣ್ಣನವರು ಪರಿಷ್ಕರಿಸುತ್ತಿದ್ದರು. ಆದ್ದರಿಂದ ಅಕ್ಷರ ಜ್ಞಾನವನ್ನು ವ್ಯವಸ್ಥಿತವಾಗಿ ಪಡೆದ ಶರಣರು ವಚನಗಳಲ್ಲಿ ಅಂದಿನ ಪರಿಪಾಠದಂತೆ ತಾಡಓಲೆಗಳ ಮೇಲೆ ಬರೆಯಲು ಸಶಕ್ತರಾಗಿದ್ದು ಅದರ ವಿಷಯದಲ್ಲಿ ಸಂದೇಹ ಪಡಲು ಸಾಧ್ಯವೇ ಇಲ್ಲ.

### ವೀರಶೈವ ಮಹಾಸಭೆಗೆ ವಚನ ಸಾಹಿತ್ಯದ ಗೊಡವೆ ಏಕೆ ?

ವೇದ, ಆಗಮ, ಶಾಸ್ತ್ರ, ಪುರಾಣ,ಸ್ಮೃತಿ, ಶ್ರುತಿಗಳಿಂದ ಪ್ರತಿಪಾದಿತವಾದ ವೀರಶೈವ ಪಂಥದ ಪ್ರತಿಪಾದಕ ಸಂಸ್ಥೆಯಾದ ವೀರಶೈವ ಮಹಾಸಭೆಯು ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯದ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವೇನಿದೆ. ವೇದಕ್ಕೆ ಒರೆಯ ಕಟ್ಟಿದ, ಶಾಸ್ತ್ರಕ್ಕೆ ನಿಗಳನಿಕ್ಕಿದ,ತರ್ಕದ ಬೆನ್ನಬಾರನೆತ್ತಿದ, ಆಗಮದ ಮೂಗ ಕೊಯ್ದ ಶರಣವಾಣಿ ವಚನ ಸಾಹಿತ್ಯ ವೀರಶೈವದ ತತ್ತ್ವ ಸಿದ್ಧಾಂತಗಳನ್ನು ಹಿಡಿದುಕೊಂಡು ಅದರ ಪ್ರತ್ಯೇಕ ಮಾನ್ಯತೆಗಾಗಿ ಮಹಾಸಭೆ ಪ್ರಯತ್ನಮಾಡಲಿ. ಲಿಂಗಾಯತ ಧರ್ಮದ ವಚನ ಸಾಹಿತ್ಯದ ಊರುಗೋಲು ಹಿಡಿದುಕೊಂಡು ಇವುಗಳ ಪಾವಿತ್ರ್ಯತೆ ಹಾಳು ಮಾಡುವ ಧೂರ್ತ ಸಂಚು ಬಿಡಲಿ ಎಂದು ಹೇಳಿದರು.

### ವೀರಶೈವ ಮಹಾಸಭೆ ಲಿಂಗಾಯತ ಸಮಾಜವನ್ನು ಒಡೆದು ಆಳಿದೆ

ವೀರಶೈವ ಮಹಾಸಭೆ ಮಾಡುವ ಮೂಲಕ ಹಾನುಗಲ್ ಕುಮಾರ ಸ್ವಾಮಿಗಳು 19ನೇ ಶತಮಾನದ ಅಂಚಿನಲ್ಲಿ ವೀರಶೈವ ಲಿಂಗಾಯತ ಸಮಾಜವನ್ನು ಒಗ್ಗೂಡಿಸಿದರು ಎಂದು ಹುಬ್ಬಳ್ಳಿಯ ಮೂರು ಸಾವಿರ ಮಠಾಧೀಶರಾದ ಗುರುಸಿದ್ದ ರಾಜಯೋಗಿಂದ್ರ ಸ್ವಾಮೀಜಿ ಹಾನುಗಲ್ ಕುಮಾರ ಸ್ವಾಮಿಯವರನ್ನು ಪ್ರಶಂಶಿಸಿದ್ದಾರೆ. ಇದು ಅಪ್ಪಟ ಸುಳ್ಳು.

ಲಿಂಗಾಯತ ಸಮಾಜದಲ್ಲಿ ಲಿಂಗಾಯತ ಎಂಬ ಪದ ಬಿಟ್ಟು ಬೇರೆ ಯಾವ ಹೆಸರೂ ಸುಳಿದಿರಲಿಲ್ಲ. ಸಮಾಜಕ್ಕೆ ಸಂಬಂಧ ವಿಲ್ಲದ ವೀರಶೈವ ಪದವನ್ನು ತಂದು ತೊರಿಸಿ ಲಿಂಗಾಯತವನ್ನು ತಾವು ವೀರಶೈವರೆಂಬ ಭ್ರಾಂತಿಗೆ ಒಳಗು ಮಾಡಿದ ಅಪಕೀರ್ತಿಗೆ ಹಾನಗಲ್ ಕುಮಾರಸ್ವಾಮಿ ಬಾಧ್ಯರಾಗುತ್ತಾರೆ.

ಶಿವಯೋಗ ಮಂದಿರದಲ್ಲಿ ತಯಾರಾದ ಬಹುಪಾಲು ಸ್ವಾಮಿಗಳು, ಕೆಲವರನ್ನು ಹೊರತು ಪಡಿಸಿದರೆ ಹೆಚ್ಚಿನವರು ವ್ಯಕ್ತಿ ನಿಷ್ಠೆ ಮತ್ತು ಜಂಗಮ ಜಾತಿಯ ಅಭಿಮಾನಕ್ಕೆ ಕಟ್ಟು ಬಿದ್ದಿರುವುದನ್ನು ಕಾಣುತ್ತೇವೆ. ಬಸವಣ್ಣನವರಿಂದ ಪ್ರಾರಂಭವಾದ ಶರಣ ಪರಂಪರೆಯಲ್ಲಿ ಎಲ್ಲ ಜಾತಿ, ವೃತ್ತಿಯಲ್ಲಿ ಹುಟ್ಟಿದವರೂ ಆಚಾರದಿಂದ ಭಕ್ತರಾಗಿ, ಅರಿವಿನಿಂದ ಗುರುವಾಗಿ, ಅನುಭಾವದಿಂದ ಜಂಗಮರಾಗಿದ್ದಾರೆ.ಇಂಥ ಶ್ರೇಷ್ಠ ಸಂಪ್ರದಾಯವನ್ನು ಬಿಡಿಸಿ ಜಂಗಮತ್ವವನ್ನು ಹುಟ್ಟಿಗೆ, ಜಾತಿಗೆ ಸೀಮಿತಗೊಳಿಸಿ ಜಂಗಮ ಜಾತಿಯಲ್ಲಿ ಹುಟ್ಟಿದವರಿಗೆ ಮಾತ್ರ ಪ್ರವೇಶ ನೀಡಿ, ಮಠಪೀಠಗಳನ್ನು ಹೊಂದುವ ಹಕ್ಕು ಅವರಿಗೆ ಮಾತ್ರ ಎಂಬ ವಿಕೃತ ಸಂಪ್ರದಾಯವನ್ನು ಹುಟ್ಟು ಹಾಕಿದ ಕೀರ್ತಿಯು ಹಾನುಗಲ್ ಕುಮಾರ ಸ್ವಾಮಿಗಳಿಗೆ ಸೇರುತ್ತದೆ.

ನಮಗೆ ಬುದ್ದಿ ಭ್ರಮಣೆಯಾಗಿದೆ ಎಂದು ಶಿವಯೋಗ ಮಂದಿರ ಸಂಸ್ಥೆಯ ಅಧ್ಯಕ್ಷರಾದ ಡಾ.ಸಂಗನ ಬಸವ ಸ್ವಾಮಿಗಳು ನಮ್ಮನ್ನು ಟೀಕಿಸಿದ್ದಾರೆ. ಅವರು ಮೂಲತ ವಿರಕ್ತಮಠದ ಅಧಿಕಾರಿಗಳು. ವಿರಕ್ತ ಸಂಪ್ರದಾಯ ಬಸವಣ್ಣ ಲಿಂಗಾಯತ ಧರ್ಮದ ಸ್ಥಾಪಕ ಎಂದು ನಂಬುವಂಥದ್ದು. ಪದವಿಯ ಆಸೆಗಾಗಿ ಈ ನಂಬಿಕೆಯನ್ನು ಬಿಟ್ಟು ಶಿವಯೋಗ ಮಂದಿರದ ಅಧ್ಯಕ್ಷರಾಗಿರುವುದು ಬುದ್ದಿ ಭ್ರಮಿತರ ಲಕ್ಷಣವಲ್ಲವೆ ? ತತ್ತ ನಿಷ್ಠೆ, ಸತ್ಯಪ್ರಿಯತೆ ವಿರಕ್ತರ ಮುಖ್ಯ ಲಕ್ಷಣ. ಅದು ಬಿಟ್ಟು ಪಕ್ಷಾಂತರ ಮಾಡುವುದು ಇವರಿಗೆ ಸೂಕ್ತವೆ ?

ಚಿತ್ರದುರ್ಗದ ಬೃಹನ್ಮಠಕ್ಕೆ ಜಯದೇವ ಸ್ವಾಮಿಗಳು ಆಯ್ಕೆಯಾದಾಗ ಈರ್ಷೆಯಿಂದ ಹಾನುಗಲ್ ಕುಮಾರ ಸ್ವಾಮಿಗಳು ಬಸವ ತತ್ತ್ವಕ್ಕೆ ವಿರುದ್ದವಾಗಿರುವ ಶಿವಯೋಗ ಮಂದಿರ ಮತ್ತು ವೀರಶೈವ ಮಹಾಸಭೆ ಸ್ಥಾಪಿಸಿದರು ಎಂಬ ನನ್ನ ಹೇಳಿಕೆಯನ್ನು ಮೂಜಗಂ ಮತ್ತು ಸಂಗಣ ಬಸವ ಸ್ವಾಮಿಗಳು ಟೀಕಿಸಿದ್ದಾರೆ. ಈ ಹೇಳಿಕೆಗೆ ನಾನು ಬದ್ದಳಾಗಿದ್ದೇನೆ. ಲಿಂಗೈಕ್ಯ ಹ.ದೇ.ಚಂದನಗೌಡರು ಸಂಪಾದಿಸಿದ ಶರಣರು ಕಂಡ ಬಸವಣ್ಣ ಎಂಬ ಪುಸ್ತಕದ ಮುನ್ನುಡಿಯ 80 ರಿಂದ 84ನೆಯ ಪುಟಗಳವರೆಗೆ ಓದಿದರೆ ನಾನು ನೀಡಿದ ಹೇಳಿಕೆ ಎಷ್ಟು ಖಚಿತವಾಗಿದೆ ಎಂಬುದು ತಿಳಿಯುತ್ತದೆ.



ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

## ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
## 2018 ರ ಜನವರಿ 11, 12, 13, 14, 15ರಂದು ನಡೆಯಲಿರುವ
## 31ನೆಯ ಶರಣಮೇಳದ ಅಂಗವಾಗಿ
## ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
## ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2018ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 31ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2018ನೆಯ ಇಸವಿಯ 31ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಾಸ್ತವ್ಯ : ಬೆಂಗಳೂರು
03-09-2017

**ವಿ.ಸೂ :** ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.ಸ್ಥಳೀಯ ಕಾರಣದಿಂದ ಬದಲಾವಣೆ ಬೇಕಾಗಿದರೆ ತಕ್ಷಣವೇ ತಿಳಿಸಿರಿ.

ಸಂಪರ್ಕಿಸುವ ದೂರವಾಣಿ:

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ – 9611698230
ಪೂಜ್ಯ ಶ್ರೀ ಸದ್ಗುರು ಮಾತೆ ಬಸವರತ್ನಾದೇವಿ –9481741795

| ಕ್ರ.ಸಂ. | ವಾರ | ದಿನಾಂಕ | ಊರಿನ ಹೆಸರು |
|---|---|---|---|
| 01. | ಬುಧ(ಚನ್ನ)ವಾರ | 01-11-2017 | ವಿಜಯಪುರ |
| 02. | ಗುರು(ಪ್ರಭು)ವಾರ | 02-11-2017 | ಬಸವ ಗಂಗೋತ್ರಿ |
| 03. | ಶುಕ್ರ(ಮಾತೃ)ವಾರ | 03-11-2017 | ಮೈಸೂರು |
| 04. | ಶನಿ(ಶರಣ)ವಾರ | 04-11-2017 | ಹಳ್ಳದಮಾದ ಹಳ್ಳಿ |
| 05. | ಭಾನು(ದೇವ)ವಾರ | 05-11-2017 | ಬೆಂಡರವಾಡಿ |
| 06. | ಸೋಮ(ಶಿವ)ವಾರ | 06-11-2017 | ಚಿಕ್ಕಮಗಳೂರು |
| 07. | ಮಂಗಳ(ಬಸವ)ವಾರ | 07-11-2017 | ಚಿಕ್ಕಮಗಳೂರು |
| 08. | ಬುಧ(ಚನ್ನ)ವಾರ | 08-11-2017 | ಶಿವಮೊಗ್ಗ |
| 09 | ಗುರು(ಪ್ರಭು)ವಾರ | 09-11-2017 | ಶಿವಮೊಗ್ಗ |
| 10. | ಶುಕ್ರ(ಮಾತೃ)ವಾರ | 10-11-2017 | ಭದ್ರಾವತಿ |
| 11. | ಶನಿ(ಶರಣ)ವಾರ | 11-11-2017 | ಭದ್ರಾವತಿ |
| 12. | ಭಾನು(ದೇವ)ವಾರ | 12-11-2017 | ದಾವಣಗೆರೆ |
| 13. | ಸೋಮ(ಶಿವ)ವಾರ | 13-11-2017 | ಚಿತ್ರದುರ್ಗ |
| 14. | ಮಂಗಳ(ಬಸವ)ವಾರ | 14-11-2017 | ಚಳ್ಳಕೆರೆ |
| 15. | ಬುಧ (ಚನ್ನ)ವಾರ | 15-11-2017 | ದೊಡ್ಡಉಳ್ಳಾರ್ತಿ |
| 16. | ಗುರು(ಪ್ರಭು)ವಾರ | 16-11-2017 | ಕೆ.ಡಿ ಕೋಟೆ |
| 17. | ಶುಕ್ರ(ಮಾತೃ)ವಾರ | 17-11-2017 | ಚಿತ್ರನಾಯಕನಹಳ್ಳಿ |
| 18. | ಶನಿ(ಶರಣ)ವಾರ | 18-11-2017 | ಘಟಪರ್ತಿ |
| 19. | ಭಾನು(ದೇವ)ವಾರ | 19-11-2017 | ಬೆಂಗಳೂರು ರ್‍ಯಾಲಿ |
| 20. | ಸೋಮ(ಶಿವ)ವಾರ | 20-11-2017 | ತೊರೆಸಿದ್ದಿಹಳ್ಳಿ |
| 21. | ಮಂಗಳ(ಬಸವ)ವಾರ | 21-11-2017 | ತಿಮ್ಮಪ್ಪಯ್ಯನಹಳ್ಳಿ |
| 22. | ಬುಧ (ಚನ್ನ)ವಾರ | 22-11-2017 | ಬಳ್ಳಾರಿ |
| 23. | ಗುರು (ಪ್ರಭು)ವಾರ | 23-11-2017 | ಬಳ್ಳಾರಿ |
| 24. | ಶುಕ್ರ(ಮಾತೃ)ವಾರ | 24-11-2017 | ಸಿರುಗುಪ್ಪ |
| 25. | ಶನಿ(ಶರಣ)ವಾರ | 25-11-2017 | ಗಂಗಾವತಿ |
| 26. | ಭಾನು(ದೇವ)ವಾರ | 26-11-2017 | ಕೊಪ್ಪಳ |



| | | | |
|---|---|---|---|
| 27. | ಸೋಮ(ಶಿವ)ವಾರ | 27-11-2017 | ಕೊಪ್ಪಳ |
| 28. | ಮಂಗಳ(ಬಸವ)ವಾರ | 28-11-2017 | ಮರಕಟ್ |
| 29. | ಬುಧ(ಚನ್ನ)ವಾರ | 29-11-2017 | ಶರಣ ಗ್ರಾಮ ಗುಳೇ |
| 30. | ಗುರು(ಪ್ರಭು)ವಾರ | 30-11-2017 | ಹುಬ್ಬಳ್ಳಿ |
| 31. | ಶುಕ್ರ(ಮಾತೃ)ವಾರ | 01-12-2017 | ಮುಮ್ಮಿಗಟ್ಟಿ |
| 32. | ಶನಿ(ಶರಣ)ವಾರ | 02-12-2017 | ಕಿತ್ತೂರು |
| 33. | ಭಾನು(ದೇವ)ವಾರ | 03-12-2017 | ಕಿತ್ತೂರು |
| 34. | ಸೋಮ(ಶಿವ)ವಾರ | 04-12-2017 | ಧಾರವಾಡ |
| 35. | ಮಂಗಳ(ಬಸವ)ವಾರ | 05-12-2017 | ಅಸುಂಡಿ |
| 36. | ಬುಧ(ಚನ್ನ)ವಾರ | 06-12-2017 | ಬೈಲಹೊಂಗಲ |
| 37. | ಗುರು(ಪ್ರಭು)ವಾರ | 07-12-2017 | ಬೈಲಹೊಂಗಲ |
| 38. | ಶುಕ್ರ(ಮಾತೃ)ವಾರ | 08-12-2017 | ಬೆಳಗಾಂ |
| 39. | ಶನಿ(ಶರಣ)ವಾರ | 09-12-2017 | ಬೆಳಗಾಂ |
| 40. | ಭಾನು(ದೇವ)ವಾರ | 10-12-2017 | ಸಂಕೇಶ್ವರ |
| 41. | ಸೋಮ(ಶಿವ)ವಾರ | 11-12-2017 | ಗಡಿಹಿಂಗ್ಲಾಜ್ |
| 42. | ಮಂಗಳ(ಬಸವ)ವಾರ | 12-12-2017 | ಗೋಕಾಕ್ |
| 43. | ಬುಧ(ಚನ್ನ)ವಾರ | 13-12-2017 | ಗೋಕಾಕ್ |
| 44. | ಗುರು(ಪ್ರಭು)ವಾರ | 14-12-2017 | ಗೋಕಾಕ್ |
| 45. | ಶುಕ್ರ(ಮಾತೃ)ವಾರ | 15-12-2017 | ಗೋಕಾಕ್ |
| 46. | ಶನಿ(ಶರಣ)ವಾರ | 16-12-2017 | ಶೇಗುಣಸಿ |
| 47. | ಭಾನು(ದೇವ)ವಾರ | 17-12-2017 | ಖವಟಕೊಪ್ಪ |
| 48. | ಸೋಮ(ಶಿವ)ವಾರ | 18-12-2017 | ತಾಂವಶಿ |
| 49. | ಮಂಗಳ(ಬಸವ)ವಾರ | 19-12-2017 | ಅಥಣಿ |
| 50. | ಬುಧ(ಚನ್ನ)ವಾರ | 20-12-2017 | ಕನಮಡಿ |
| 51. | ಗುರು(ಪ್ರಭು)ವಾರ | 21-12-2017 | ಚಡಚಣ |
| 52. | ಶುಕ್ರ(ಮಾತೃ)ವಾರ | 22-12-2017 | ವಿಜಯಪುರ |
| 53. | ಶನಿ(ಶರಣ)ವಾರ | 23-12-2017 | ಮಾರ್ಕಬ್ಬಿನಹಳ್ಳಿ |

| | | | |
|---|---|---|---|
| 54. | ಭಾನು(ದೇವ)ವಾರ | 24-12-2017 | ಗುಲಬರ್ಗಾ(ನೃಪತುಂಗನಗರ) |
| 55. | ಸೋಮ(ಶಿವ)ವಾರ | 25-12-2017 | ಗುಲಬರ್ಗಾ(ಮಹಾಂತೇಶ) |
| 56. | ಮಂಗಳ(ಬಸವ)ವಾರ | 26-12-2017 | ಉದಗೀರ್ |
| 57. | ಬುಧ(ಚನ್ನ)ವಾರ | 27-12-2017 | ಕಮಲನಗರ |
| 58. | ಗುರು(ಪ್ರಭು)ವಾರ | 28-12-2017 | ಬೀದರ್ |
| 59. | ಶುಕ್ರ(ಮಾತೃ)ವಾರ | 29-12-2017 | ಜಹೀರಾಬಾದ್ |
| 60. | ಶನಿ(ಶರಣ)ವಾರ | 30-12-2017 | ಜಹೀರಾಬಾದ್ |
| 61. | ಭಾನು(ದೇವ)ವಾರ | 31-12-2017 | ಹೈದ್ರಾಬಾದ್ |
| 62. | ಸೋಮ(ಶಿವ)ವಾರ | 01-01-2018 | ಹೈದ್ರಾಬಾದ್ |
| 63. | ಮಂಗಳ(ಬಸವ)ವಾರ | 02-01-2018 | ಹೈದ್ರಾಬಾದ್ |
| 64. | ಬುಧ(ಚನ್ನ)ವಾರ | 03-01-2018 | ಹೈದ್ರಾಬಾದ್ |
| 65. | ಗುರು(ಪ್ರಭು)ವಾರ | 04-01-2018 | ಹೈದ್ರಾಬಾದ್ |
| 66 | ಶುಕ್ರ(ಮಾತೃ)ವಾರ | 05-01-2018 | ಹೈದ್ರಾಬಾದ್ |
| 67. | ಶನಿ(ಶರಣ)ವಾರ | 06-01-2018 | ಹೈದ್ರಾಬಾದ್ |
| 68. | ಭಾನು(ದೇವ)ವಾರ | 07-01-2018 | ಹೈದ್ರಾಬಾದ್ |
| 69. | ಸೋಮ(ಶಿವ)ವಾರ | 08-01-2018 | ಹೈದ್ರಾಬಾದ್ |
| 70. | ಮಂಗಳ(ಬಸವ)ವಾರ | 09-01-2018 | ಹೈದ್ರಾಬಾದ್ |
| 71. | ಬುಧ(ಚನ್ನ)ವಾರ | 10-01-2018 | ಕೂಡಲ ಸಂಗಮಕ್ಕೆ ಪ್ರಯಾಣ |

## ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ.

ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಕಲ್ಯಾಣ ಪರ್ವದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ.

ಸಂಪರ್ಕಿಸುವ ದೂರವಾಣಿ: 9945806297




















November Sanchike Published on 08-11-2017
Name of the Printer - Sumuka Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/wpp-17/2015-17,
Licenced to Post the Printed Magazine without Prepayment (WPP-17).
Posted at Bengalure PSO, Mysuru Road, (Bg-560026) on 3rd, 10th, 11th,
20th of every month, Pages 32+4